ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 50 2023

ಮಂಗಳವಾರ, ನವೆಂಬರ್ 28, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 196 RNI : 27369/75

janathavani@mac.com
www.janathavani.com
08192 254736 91642 99999

## ಸಮಸ್ಯೆ ವಿಧಾನಸೌಧಕ್ಕೆ ಬಂದರೆ ಕ್ರಮ

**ಅಧಿಕಾರಿಗಳಿಗೆ ಸಿಎಂ ಎಚ್ಚರಿಕೆ**

ಬೆಂಗಳೂರು, ನ. 27 - ಜಿಲ್ಲಾ ಮಟ್ಟದಲ್ಲೇ ಬಗೆಹರಿಯಬೇಕಾದ ಸಮಸ್ಯೆಗಳನ್ನು ವಿಧಾನಸೌಧದವರೆಗೂ ತಂದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಮುಂಜಾನೆ ಯಿಂದ ಸಂಜೆವರೆಗೂ ಜನತಾ ದರ್ಶನ ಏರ್ಪಡಿಸಿ ನಾಗರಿಕರ ಅಹವಾಲುಗಳನ್ನು ಸ್ವೀಕರಿಸಿ, ಪರಿಹರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನವರೆಗೆ ಸಮಸ್ಯೆಗಳನ್ನು ಇಟ್ಟುಕೊಂಡು ಬಂದರೆ ಅದು ಅಧಿಕಾರಿಗಳ ವೈಫಲ್ಯ. ಇದನ್ನು ನಾನು ಸಹಿಸುವುದಿಲ್ಲ ಎಂದರು.

ಜನರು ದುಡ್ಡು ಖರ್ಚು ಮಾಡಿಕೊಂಡು ಬೆಂಗಳೂರಿನವರೆಗೂ ಬರುವುದಾದರೆ, (4ನೇ ಪುಟಕ್ಕೆ)

## ಮಾರಾಟಕ್ಕಿವೆ

ಹರಿಹರ ನಗರದ ಭಾಗೀರಥಿ ಕಲ್ಯಾಣ ಮಂಟಪ ಹಿಂಬದಿಯಲ್ಲಿ ಡಿ.ಸಿ. ಅಪ್ರೂಲ್ ಆಗಿರುವ 39 ಸಾವಿರ ಅಡಿ ಜಾಗವಿದ್ದು, ಇದರಲ್ಲಿ 100/88 ಅಡಿ 4 ಗೋಡೌನ್‌ಗಳು, 102/27 ಅಡಿ 5 ಮಳಿಗೆಗಳು, 102/37 ಅಡಿಯ 5 ಆರ್‌ಸಿಸಿ ಮನೆಗಳು ಮಾರಾಟಕ್ಕಿವೆ.

94483 27937 - 97390 27320

## ಭಾವಪೂರ್ಣ ಶ್ರದ್ಧಾಂಜಲಿ



**ಎಲ್. ಜಯಣ್ಣ (ಜಯಚಂದ್ರ)**

ಸಂಪಾದಕರು : ಚಂಪಿಕಾ ಮಾಸ ಪತ್ರಿಕೆ, ದಾವಣಗೆರೆ., ರಾಜ್ಯಾಧ್ಯಕ್ಷರು : ಕರ್ನಾಟಕ ಸಿರಿ ಸಂಘಟನೆ

ದಿನಾಂಕ : 20.11.2023ರ ಸೋಮವಾರ ನಿಧನರಾದ ಎಲ್. ಜಯಣ್ಣ, ಚಂಪಿಕಾ ಪತ್ರಿಕೆ ಸಂಪಾದಕರು ಹಾಗೂ ಕಾದಂಬರಿಕಾರರು, ಕರ್ನಾಟಕ ಸಿರಿ ಸಂಘಟನೆಯ ರಾಜ್ಯಾಧ್ಯಕ್ಷರು, ಸಿರಿನಾಡು ರೂರಲ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಸೊಸೈಟಿ ರಿ., ಕಾರ್ಯದರ್ಶಿಗಳೂ ಹಾಗೂ ಸಾಂಸ್ಕೃತಿಕ ಸಂಘಟನೆಗಳ ಮೂಲಕ ಜನಪರ ಹಾಗೂ ಕಲಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಂಡು ಪ್ರತಿಭಾವಂತರನ್ನು ಹಾಗೂ ಸಾಧಕರನ್ನು ಗುರುತಿಸಿ, ಸಂಸ್ಥೆಯ ಮೂಲಕ ಸನ್ಮಾನಿಸುತ್ತಿದ್ದ ಇಂತವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಭಗವಂತನು ದಯಪಾಲಿಸಲೆಂದು ನಾವುಗಳು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಕರ್ನಾಟಕ ಸಿರಿ ಸಂಘಟನೆಯ ಸದಸ್ಯರು, ಸ್ನೇಹಿತರು ಹಾಗೂ ಅಭಿಮಾನಿಗಳು.

ಮೃತರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ದಿನಾಂಕ : 29.11.2023ರ ಬುಧವಾರ ಸಂಜೆ 4.00 ಗಂಟೆಗೆ ರೋಟರಿ ಕ್ಲಬ್, ದಾವಣಗೆರೆಯಲ್ಲಿ ಹಮ್ಮಿಕೊಳ್ಳಲಾಗಿದೆ. ತಪ್ಪದೇ ತಾವುಗಳೆಲ್ಲರೂ ಆಗಮಿಸಬೇಕಾಗಿ ವಿನಂತಿ.

ಫೋನ್ : 95358 30058, 81232 70058, 99802 71139

## ನಾಲ್ಕನೇ ವರ್ಷದ ಪುಣ್ಯಸ್ಮರಣೆ



**ದಿ. ದೊಗ್ಗಳ್ಳಿ ಜಯಣ್ಣನವರು**

ನಿಧನ : 28.11.2019

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ

ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಬಂಧು-ಮಿತ್ರರು ಹಾಗೂ ದೊಗ್ಗಳ್ಳಿ ವಂಶಸ್ಥರು.

## ಮಾಗಾನಹಳ್ಳಿ ಚೆನ್ನಮ್ಮ ನಿಧನ



ದಾವಣಗೆರೆ ಸಿಟಿ, ಡೋರ್ ನಂ. 2581/4, 4ನೇ ಮೇನ್,
ಎಂ.ಸಿ.ಸಿ. 'ಎ' ಬ್ಲಾಕ್, ಚರ್ಚ್ ರಸ್ತೆ ವಾಸಿ
ದಿ. ಮಾಗಾನಹಳ್ಳಿ ಸಂಗನಬಸಪ್ಪ ಇವರ ಧರ್ಮಪತ್ನಿ

**ಶ್ರೀಮತಿ ಮಾಗಾನಹಳ್ಳಿ ಚೆನ್ನಮ್ಮ (98)**

ಇವರು ದಿನಾಂಕ 27.11.2023ರ ಸೋಮವಾರ ಮಧ್ಯಾಹ್ನ 12.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಸಂಸ್ಕಾರವನ್ನು ದಿನಾಂಕ 28.11.2023ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಮಾಗಾನಹಳ್ಳಿ ಹಾಗೂ ಮುಂಡಾಸ್ ವಂಶಸ್ಥರು

**ಶ್ರೀ ಬಸವರಾಜ ಎಲೆಕ್ಟ್ರಿಕಲ್ ಸ್ಟೋರ್ಸ್**

ಪಿ.ಬಿ.ರಸ್ತೆ, ದಾವಣಗೆರೆ. ಮೊ : 98451 55955, 98866 48411

॥ ಕಲ್ಲೇಶ್ವರ ಪ್ರಸನ್ನ ॥ ॥ ಬಕ್ಕೇಶ್ವರ ಪ್ರಸನ್ನ ॥

## 16 ನೇ ವರ್ಷದ ಪುಣ್ಯಸ್ಮರಣೆ



**ಲಿಂ॥ ಶ್ರೀಮತಿ ಪಾರ್ವತಮ್ಮ ಡಾ. ಶಾಮನೂರು ಶಿವಶಂಕರಪ್ಪ**

ಜನನ : 10-8-1934 ಮರಣ : 28-11-2007

ನೀವು ನಮ್ಮನ್ನಗಲಿ ಇಂದಿಗೆ
ಹದಿನಾರು ವರ್ಷಗಳಾದವು.
ಎಲ್ಲರ ನೋವು, ಕಷ್ಟ-ಸಂಕಷ್ಟಗಳಿಗೆ
ಸ್ಪಂದಿಸುತ್ತ ಬದುಕಿದವರು ನೀವು.
ನಿಮ್ಮ ಸರಳತೆ ಮತ್ತು ಸನ್ಮಾರ್ಗವೇ
ನಮಗೆ ಪ್ರೇರಣೆ.
ನಮ್ಮ ಮನೆಯ ನಂದಾದೀಪವಾಗಿದ್ದ ನೀವು
ನಿತ್ಯ ಸ್ಮರಣೀಯರಾಗಿದ್ದೀರಿ...

ಸದಾ ನಿಮ್ಮ ಸ್ಮರಣೆಯಲ್ಲಿರುವ

**ಡಾ. ಶಾಮನೂರು ಶಿವಶಂಕರಪ್ಪ**

ಮತ್ತು ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು
ಸೊಸೆಯಂದಿರು, ಅಳಿಯಂದಿರು ಹಾಗೂ ಶಾಮನೂರು ಕುಟುಂಬ ವರ್ಗ

### ಭಾವಪೂರ್ಣ ಗೌರವಾಂಜಲಿ ಸಲ್ಲಿಸುವವರು :

**ಶ್ರೀ ಡಾ॥ ಎಸ್.ಎಸ್.ಬಕ್ಕೇಶ್, ಶ್ರೀಮತಿ ಪ್ರೀತಿ ಬಕ್ಕೇಶ್**
ಶ್ರೀ ಅಶಿಕ್, ಶ್ರೀಮತಿ ಡಾ॥ ಸಮಜ್ಞಾ, ಶ್ರೀಮತಿ ಅಕ್ಷತಾ ಶ್ರೀ ಅಭಿಷೇಕ್ ಪಾಟೀಲ್, ಶ್ರೀ ಆದಿತ್ ಶ್ರೀಮತಿ ಅಪರಾಜಿತ

**ಶ್ರೀ ಎಸ್.ಎಸ್. ಗಣೇಶ್, ಶ್ರೀಮತಿ ರೇಖಾ ಗಣೇಶ್.**
ಶ್ರೀ ಅಭಿಜಿತ್ ಶ್ರೀಮತಿ ಸ್ವಾತಿ, ಸುವೀರ್, ಶ್ರೀಮತಿ ಆಂಚಲ್ ಶ್ರೀ ಪ್ರಶಾಂತ್ ಜೆ. ಶೆಟ್ಟರ್, ಆರಾನಾ ಶೆಟ್ಟರ್, ಶ್ರೀಮತಿ ಅಖಿಲಾ, ಶ್ರೀ ಬಸನಗೌಡ ಪಾಟೀಲ್,

**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಶ್ರೀಮತಿ ಡಾ॥ ಪ್ರಭಾ ಮಲ್ಲಿಕಾರ್ಜುನ್**
ಸಮರ್ಥ, ಶ್ರೇಷ್ಠಾ, ಶಿವ ಶಾಮನೂರು

**ಶ್ರೀಮತಿ ಡಾ॥ ಮಂಜುಳ ಶ್ರೀ ಡಾ॥ ಶಿವಶಂಕರ್.**
ಡಾ॥ ಸಂಜನ, ಶ್ರೀಮತಿ ಸೆಮುತಿ, ಶ್ರೀ ಹರ್ಷಿತ್

**ಶ್ರೀಮತಿ ಸುಧಾ ಶ್ರೀ ರಾಜೇಂದ್ರ ಪಾಟೀಲ್**
ಶ್ರೀಮತಿ ಸುಪ್ರಿಯ ಶ್ರೀ ಪ್ರತೀಕ್, ಮೈರಾ, ಧೃವ, ದಿ॥ ಸುಷ್ಮಿತ

**ಶ್ರೀಮತಿ ಡಾ॥ ಶೈಲಾ ಶ್ರೀ ಡಾ॥ ಅರ್ಪಣ್ ಭಟ್ಟಾಚಾರ್ಯ**
ಡಾ॥ ಶ್ರೇಯಸಿ, ಅಮರ್ತ್ಯ

**ಶ್ರೀಮತಿ ಮೀನಾ, ಶ್ರೀ ಡಾ॥ ಶರಣ್ ಪಾಟೀಲ್.**
ಡಾ॥ ಸೃಷ್ಟಿ, ಡಾ॥ ಸಂಸ್ಕೃತಿ

ಶ್ರೀ ದಿ॥ ಎಸ್. ಬಸವರಾಜಪ್ಪ , ದಿ॥ ಶ್ರೀಮತಿ ಸುಶೀಲಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

**ಶ್ರೀ ಡಾ॥ ಎಸ್.ಜಿ. ಮುರುಗೇಶ್, ಶ್ರೀಮತಿ ಜ್ಯೋತಿ ಮುರುಗೇಶ್,**
ಶ್ರೀ ಆಕರ್ಷ್, ಶ್ರೀಮತಿ ಅಲಂಕೃತಾ, ಶ್ರೀ ಡಾ॥ ಧೃವ

**ಶ್ರೀಮತಿ ರತ್ನ ಶ್ರೀ ಜಿ.ಎಸ್. ಪರಮೇಶ್ವರ್ ಗೌಡ್ರು,**
ಶ್ರೀ ಸಂದೀಪ್ ಶ್ರೀಮತಿ ಶ್ವೇತಾ, ಶ್ರೀ ಸ್ವರೂಪ್ ಶ್ರೀಮತಿ ಪ್ರಿಯ

**ಶ್ರೀಮತಿ ಉಮಾ ಶ್ರೀ ಡಾ॥ ಧನ್ಯ ಪ್ರಕಾಶ್**

**ಡಾ॥ ಸವೇಶ್, ಡಾ॥ ಶ್ರೀಶಾ**

**ಶ್ರೀಮತಿ ವೀಣಾ ಶ್ರೀ ಕಿಶೋರ್ ಗೌಡ,** ಸೇಜಲ್

**ಶ್ರೀಮತಿ ಅನುಪಮ ಶ್ರೀ ಚಂದ್ರಶೇಖರ್,** ಸಮೃದ್ಧ್ , ಸಂಹಿತ

ಶ್ರೀಮತಿ ದಿ॥ ತಿಪ್ಪಮ್ಮನವರ ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

**ಶ್ರೀಮತಿ ಡಾ॥ ಪ್ರಶಾಂತ್ ಕುಮಾರಿ ಶ್ರೀ ಡಾ॥ ಮಲ್ಲಿಕಾರ್ಜುನ್,** ಸಿಮಂತಿನಿ, ಮನು

**ಶ್ರೀಮತಿ ಎ.ಎಸ್. ಗಿರಿಜ ಶ್ರೀ ಎಸ್. ಉಮಾಪತಿ,** ಅರವಿಂದ್, ಅಶ್ವಿನ್

**ಶ್ರೀಮತಿ ಸುನಂದ ದಿ॥ ಶ್ರೀ ಡಾ॥ ವಿಶ್ವಕುಮಾರ್,** ಡಾ॥ ಚೇತನ್, ಡಾ॥ ತೇಜಸ್ವಿನಿ

**ಶ್ರೀಮತಿ ಸುಜಾತ ದಿ॥ ಡಾ॥ ರುದ್ರಮೂರ್ತಿ,** ಅಪೂರ್ವ

**ಶ್ರೀ ಎ.ಎಸ್. ನಿರಂಜನ್, ಶ್ರೀಮತಿ ಚಂಪ,** ವಿನಯ್, ಶ್ರೀಶೈಲಾ

ಹಾಗೂ ಶಾಮನೂರು ಮನೆತನದವರು, ಬಂಧು-ಮಿತ್ರರು

## ಸಂಕ್ಷಿಪ್ತ ಸುದ್ದಿ

**ಇಸ್ರೇಲ್ - ಹಮಾಸ್ ಕದನ ವಿರಾಮ ವಿಸ್ತರಣೆ**

ಟೆಲ್ ಅವೀವ್ : ಸೋಮವಾರದ ನಂತರ ಕದನ ವಿರಾಮವನ್ನು ಇನ್ನೆರಡು ದಿನಗಳ ಕಾಲ ವಿಸ್ತರಿಸಲು ಇಸ್ರೇಲ್ ಹಾಗೂ ಹಮಾಸ್ ನಿರ್ಧರಿಸಿವೆ. ಇದರಿಂದಾಗಿ ವಿನಾಶಕಾರಿ ಯುದ್ಧದ ಅಪಾಯ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ ಹಾಗೂ ಒತ್ತೆಯಾಳುಗಳ ಬಿಡುಗಡೆಗೆ ದಾರಿಯಾಗಿದೆ. ಉಭಯ ದೇಶಗಳು ಈ ಹಿಂದೆ ನಾಲ್ಕು ದಿನಗಳ ಕದನ ವಿರಾಮ ಘೋಷಿಸಿದ್ದವು. ಪ್ರತಿ ಹತ್ತು ಹೆಚ್ಚುವರಿ ಒತ್ತೆಯಾಳುಗಳ ಬಿಡುಗಡೆಗಾಗಿ ಒಂದು ದಿನ ಕದನ ವಿರಾಮ ವಿಸ್ತರಿಸುವುದಾಗಿ ಇಸ್ರೇಲ್ ತಿಳಿಸಿದೆ. ಇದೇ ಷರತ್ತಿನಂತೆ ಎರಡು ದಿನಗಳ ಕಾಲ ಕದನ ವಿರಾಮ ವಿಸ್ತರಿಸುವುದಾಗಿ ಹಮಾಸ್ ಹೇಳಿದೆ.

**ಮೋದಿ ಯುಗಪುರುಷ ಎಂದ ಉಪ ರಾಷ್ಟ್ರಪತಿ**

ಮುಂಬೈ : ಮಹಾತ್ಮಗಾಂಧಿ ಅವರು ಕಳೆದ ಶತಮಾನದ ಮಹಾಪುರುಷರಾಗಿದ್ದಾರೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಈ ಶತಮಾನದ ಯುಗಪುರುಷ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಬಣ್ಣಿಸಿದ್ದಾರೆ. ಗಾಂಧೀಜಿ ಅವರು ನಮ್ಮನ್ನು ಗುಲಾಮಗಿರಿಯಿಂದ ಮುಕ್ತಗೊಳಿಸಿದರು. ಮೋದಿ ನಮ್ಮನ್ನು ನಾವು ಸದಾ ಬಯಸಿದ ಹಾದಿಯಲ್ಲಿ ಕರೆದೊಯ್ಯುತ್ತಿದ್ದಾರೆ ಎಂದವರು ಹೇಳಿದ್ದಾರೆ.

**ತೆಲಂಗಾಣದಲ್ಲಿ ಜಾಹೀರಾತು ಪ್ರಕಟಿಸದಂತೆ ಕರ್ನಾಟಕ ಸರ್ಕಾರಕ್ಕೆ ನಿರ್ಬಂಧ**

ನವದೆಹಲಿ : ಚುನಾವಣೆ ಎದುರಿಸಲಿರುವ ತೆಲಂಗಾಣದ ಪತ್ರಿಕೆಗಳಲ್ಲಿ ಜಾಹೀರಾತು ನೀಡುವುದನ್ನು ನಿಲ್ಲಿಸುವಂತೆ ಕರ್ನಾಟಕ ಕಾಂಗ್ರೆಸ್ ಸರ್ಕಾರಕ್ಕೆ ಚುನಾವಣಾ ಆಯೋಗ ತಿಳಿಸಿದೆ. ಚುನಾವಣಾ ನೀತಿ ಸಂಹಿತೆ ಇರುವ ಸಂದರ್ಭದಲ್ಲಿ ಜಾಹೀರಾತು ನೀಡುವುದಕ್ಕೆ ಮುಂಚೆ ಏಕೆ ತನ್ನ ಅನುಮತಿ ಪಡೆದಿಲ್ಲ ಎಂದು ಚುನಾವಣಾ ಆಯೋಗ ಪ್ರಶ್ನಿಸಿದೆ.

**ಗುಜರಾತ್‌ನಲ್ಲಿ ಸಿಡಿಲು ಬಡಿದು 27 ಸಾವು**

ಅಹಮದಾಬಾದ್ : ಗುಜರಾತ್‌ನಲ್ಲಿ ಹಲವೆಡೆ ಸಿಡಿಲು ಅಪ್ಪಳಿಸಿ 27 ಜನ ಸಾವನ್ನಪ್ಪಿದ್ದಾರೆ. ರಾಜ್ಯದಲ್ಲಿ ಅಕಾಲಿಕ ಮಳೆ ಸುರಿದು ಮನೆ ಹಾಗೂ ಬೆಳೆಗಳಿಗೆ ಹಾನಿಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಸಿ.ಎ.ಎ. ಜಾರಿಗೆ ತರುವುದಕ್ಕೆ ಪ್ರತಿಪಕ್ಷಗಳ ವಿರೋಧ**

ಗುವಾಹತಿ : ಕೇಂದ್ರ ಸರ್ಕಾರ ಸಿ.ಎ.ಎ. ಜಾರಿಗೆ ತರುವುದನ್ನು ವಿರೋಧಿಸುವುದಾಗಿ ಅಸ್ಸಾಂನ ಪ್ರತಿಪಕ್ಷಗಳು ಹೇಳಿವೆ. ಸಿ.ಎ.ಎ. ಶಾಸನದ ಅಂತಿಮ ಕರಡು ಮುಂದಿನ ವರ್ಷ ಮಾರ್ಚ್ ವೇಳೆಗೆ ಸಿದ್ಧವಾಗಲಿದೆ ಎಂದು ಕೇಂದ್ರ ಗೃಹ ಖಾತೆ ಅಧೀನ ಸಚಿವ ಅಜಯ್ ಮಿಶ್ರ ಹೇಳಿರುವ ಹಿನ್ನೆಲೆಯಲ್ಲಿ ಪ್ರತಿಪಕ್ಷಗಳು ಈ ಪ್ರತಿಕ್ರಿಯೆ ನೀಡಿವೆ.

**ಜೀವಕ್ಕೆ ಅಪಾಯ ಇದೆ ಎಂದ ಲಂಕಾ ಸಚಿವನ ವಜಾ**

ಕೊಲಂಬೊ : ಕ್ರಿಕೆಟ್ ವಲಯದಲ್ಲಿನ ಉನ್ನತ ಹಂತದ ಭ್ರಷ್ಟಾಚಾರ ಬಯಲಿಗೆ ಎಳೆದಿರುವುದಕ್ಕೆ ತಮ್ಮ ಪ್ರಾಣಕ್ಕೆ ಅಪಾಯವಿದೆ ಎಂದು ಶ್ರೀಲಂಕಾದ ಕ್ರೀಡಾ ಸಚಿವ ರೋಶನ್ ರಣಸಿಂಘೆ ಹೇಳಿದ್ದಾರೆ. ಇದಾದ ಗಂಟೆಗಳ ನಂತರ ಲಂಕಾ ಅಧ್ಯಕ್ಷ ರಾಣಿಲ್ ವಿಕ್ರಮಸಿಂಘೆ ಅವರು ಸಚಿವರನ್ನು ವಜಾಗೊಳಿಸಿದ್ದಾರೆ.

**ಭಾರತದ ನಾಗರಿಕರಿಗೆ ಮಲೇಷಿಯಾದಲ್ಲಿ ವೀಸಾ ಮುಕ್ತ ಪ್ರವೇಶ**

ಕೌಲಾಲಂಪುರ : ಭಾರತ ಹಾಗೂ ಚೀನಾದ ನಾಗರಿಕರಿಗೆ ಡಿಸೆಂಬರ್ 1ರಿಂದ 30 ದಿನಗಳ ವೀಸಾ ಮುಕ್ತ ಪ್ರವೇಶ ನೀಡುವುದಾಗಿ ಮಲೇಷಿಯಾದ ಪ್ರಧಾನ ಮಂತ್ರಿ ಅನ್ವರ್ ಇಬ್ರಾಹಿಂ ಘೋಷಿಸಿದ್ದಾರೆ. ಥೈಲ್ಯಾಂಡ್ ಹಾಗೂ ಶ್ರೀಲಂಕಾಗಳೂ ಸಹ ಇತ್ತೀಚಿನ ವಾರಗಳಲ್ಲಿ ವಿದೇಶಿಯರಿಗೆ ವೀಸಾ ರಹಿತ ಪ್ರವಾಸದ ಸೌಲಭ್ಯ ಪ್ರಕಟಿಸಿದ್ದವು.

# ಕಾಕನೂರು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಮಕ್ಕಳು ಅಸ್ವಸ್ಥ

**ಅಧಿಕಾರಿಗಳ ವಿರುದ್ಧ ಶಾಸಕ ಬಸವರಾಜು ಶಿವಗಂಗಾ ಆಕ್ರೋಶ**





ಸಂತೆಬೆನ್ನೂರು (ಚನ್ನಗಿರಿ), ನ.27- ತಾಲ್ಲೂಕಿನ ಕಾಕನೂರಿನಲ್ಲಿರುವ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಸಿಬ್ಬಂದಿಗಳ ಬೇಜವಾಬ್ದಾರಿ, ಉದಾಸೀನದ ಫಲವಾಗಿ ವಸತಿ ಶಾಲೆಯ 23 ಮಕ್ಕಳು ಭಾನುವಾರ ರಾತ್ರಿಯ ಊಟ, ಸೋಮವಾರ ಬೆಳಗ್ಗೆ ತಿಂಡಿ ಸೇವಿಸಿದ 23 ಮಕ್ಕಳು ಅಸ್ವಸ್ಥಗೊಂಡಿದ್ದು, ಶಾಸಕ ಬಸವರಾಜು ವಿ ಶಿವಗಂಗಾ ಅವರು ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅಸ್ವಸ್ಥಗೊಂಡ ಮಕ್ಕಳ ಮಾಹಿತಿ ಪಡೆದಿದ್ದ ಶಾಸಕರು, ತಕ್ಷಣವೇ ಎಲ್ಲಾ ಮಕ್ಕಳನ್ನು ಸಂತೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ, ಕಳಪೆ ಆಹಾರ ನೀಡುತ್ತಿರುವುದನ್ನು ಪತ್ತೆ ಹಚ್ಚಿದ್ದಾರೆ. ಸರ್ಕಾರಿ ವೇತನವನ್ನು ಪಡೆದು ಮಕ್ಕಳ ಅನಾರೋಗ್ಯಕ್ಕೆ ಕಾರಣರಾದ ವಸತಿ ನಿಲಯದ ವಾರ್ಡನ್ ಮತ್ತು ಸಿಬ್ಬಂದಿಗಳನ್ನು ಕೂಡಲೇ ಅಮಾನತ್ತು ಮಾಡುವಂತೆ ಶಾಸಕರು ಇಲಾಖೆಯ ಮುಖ್ಯಸ್ಥರಿಗೆ ಸೂಚಿಸಿದ್ದಾರೆ.

ಅವಧಿ ಮುಗಿದ ಆಹಾರ ಪದಾರ್ಥಗಳನ್ನು ಆಹಾರ ತಯಾರಿಕೆಗೆ ಬಳಕೆಯಾಗಿರುವುದು, ಸ್ವಚ್ಛತೆ ಮಾಯವಾಗಿರುವುದು, ಮಕ್ಕಳ ದೈನಂದಿನ ಜೀವನಕ್ಕೆ ಅವಶ್ಯಕ ಮೂಲ ಸೌಲಭ್ಯಗಳನ್ನು ನೀಡದೇ ಇರುವುದು, ಕೊಳೆತ ತರಕಾರಿಗಳನ್ನು ಉಪಯೋಗಿಸಿರುವುದು, ವಿದ್ಯಾರ್ಥಿಗಳಿಗೆ ಹಾಸಿಗೆ, ಎಣ್ಣೆ, ಬಿಸಿ ನೀರು ನೀಡದೇ ಇರುವುದರ ಬಗ್ಗೆ ಇಂಚಿಂಚು ಪರಿಶೀಲಿಸಿ, ಇಲಾಖೆಯ ಮುಖ್ಯಸ್ಥರಿಗೆ ಶಾಸಕರು ಕಠಿಣ ಕ್ರಮ ವಹಿಸಲು ಸೂಚಿಸಿದ್ದಾರೆ.

ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಮಲ್ಲಿಕಾರ್ಜುನ್ ಅವರ ನಿರ್ಲಕ್ಷ್ಯ ಧೋರಣೆಯೇ ಇಲಾಖೆಯ ಈ ವ್ಯವಸ್ಥೆಗೆ ನೇರ ಕಾರಣವಾಗಿದ್ದ ಹಿನ್ನೆಲೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಇಲಾಖೆಯ ಕಾರ್ಯವೈಖರಿ ಬಗ್ಗೆ ರಾಜ್ಯ ಮಟ್ಟದ ಇಲಾಖೆಯ ಮುಖ್ಯಸ್ಥರೊಂದಿಗೆ ಈಗಾಗಲೇ ಚರ್ಚಿಸಿರುವ ಶಾಸಕರು, ಮಕ್ಕಳ ಈ ಪರಿಸ್ಥಿತಿಯನ್ನು ಕಂಡು ಸ್ವತಃ ಕಣ್ಣೀರು ತುಂಬಿಕೊಂಡ ಶಾಸಕರು, ಮಾನವೀಯತೆಯೊಂದಿಗೆ ಪ್ರಾಮಾಣಿಕ ಸೇವೆಯು ಇಲ್ಲದಿರುವ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದರು.

ಇಲಾಖೆಯ ಮುಖ್ಯಸ್ಥರಿಗೆ ತೀವ್ರ ತರಾಟೆ ತೆಗೆದುಕೊಂಡ ಶಾಸಕರು, ಉತ್ತಮ ಶಿಕ್ಷಣ ಕೊಡುವುದರ ಜೊತೆ ಮಕ್ಕಳ ಹಕ್ಕುಗಳಿಗೆ ಚ್ಯುತಿ ಬಂದರೆ ಸಹಿಸಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಕ್ಕಳ ಆರೋಗ್ಯದ ಬಗ್ಗೆ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಸ್ವತಃ ಫೋನ್ ಮಾಡಿದಾಗ ಅವರ ಮೊಬೈಲ್ ಸ್ವಿಚ್ ಆಫ್ ಆಗಿದ್ದ ಹಿನ್ನೆಲೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಅಸ್ವಸ್ಥಗೊಂಡ ಮಕ್ಕಳ ಆರೋಗ್ಯದ ಬಗ್ಗೆ ಕರೆ ಮಾಡಿ, ಕಾಳಜಿ ವಹಿಸುವಂತೆ ಸೂಚಿಸಿದರು. ಪ್ರತಿ ಗಂಟೆಗೆ ಒಮ್ಮೆ ಮಾಹಿತಿ ನೀಡುವಂತೆಯೂ ಸೂಚಿಸಿದ್ದಾರೆ.

## ಇದು ಹುಚ್ಚುತನ : ನಿವೃತ್ತಿಗೆ ಮೂರು ದಿನಗಳಿರುವಾಗ ರೈಲ್ವೆ ಇಂಜಿನಿಯರ್ ವರ್ಗ

ನವದೆಹಲಿ, ನ. 27 – ನಿವೃತ್ತಿಗೆ ಕೇವಲ ಮೂರು ದಿನಗಳಿರುವಂತೆಯೇ ರೈಲ್ವೆಯ ಹಿರಿಯ ಇಂಜಿನಿಯರ್ ಒಬ್ಬರನ್ನು ಛತ್ತೀಸ್‌ಘಡದ ಬಿಲಾಸ್ಪುರದಿಂದ ದೆಹಲಿಗೆ ವರ್ಗಾಯಿಸಲಾಗಿದೆ. ಈ ಕ್ರಮ ಹುಚ್ಚುತನ ಎಂದು ಇಂಜಿನಿಯರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎಸ್.ಇ.ಸಿ.ಆರ್. ರೈಲ್ವೆ ವಲಯದ ಬಿಲಾಸ್ಪುರ ವಿಭಾಗದ ಸಂಪರ್ಕ ಮುಖ್ಯ ಇಂಜಿನಿಯರ್ ಕೆ.ಪಿ. ಆರ್ಯ ಅವರನ್ನು ಉತ್ತರ ರೈಲ್ವೆಗೆ ವರ್ಗಾಯಿಸಲಾಗಿದೆ. ಇಂಜಿನಿಯರ್ ಈ ಬಗ್ಗೆ ಆಕ್ಷೇಪಿಸಿ ರೈಲ್ವೆ ಮಂಡಳಿಗೆ ಪತ್ರ ಬರೆದಿದ್ದಾರೆ.

ನವೆಂಬರ್ 28ರಂದು ಉತ್ತರ ರೈಲ್ವೆಯಲ್ಲಿ ಬಡ್ತಿ ನೀಡಲಾದ ಹುದ್ದೆ ವಹಿಸಿಕೊಳ್ಳುವಂತೆ ತಿಳಿಸಲಾಗಿದೆ. ಅವರು ನವೆಂಬರ್ 30ರಂದು ನಿವೃತ್ತರಾಗಬೇಕಿದೆ.

ಈ ಆದೇಶ ಹುಚ್ಚುತನದ್ದಾಗಿದೆ. ಈ ಕ್ರಮದಿಂದ ನಿವೃತ್ತಿಯ ನಂತರದ ನೆರವುಗಳನ್ನು ಪಡೆಯುವುದಕ್ಕೆ ಅಡ್ಡಿಯಾಗಲಿದೆ. ಸಂಘಟನೆಯಲ್ಲಿ ಕೊನೆಯ ದಿನಗಳಲ್ಲಿ ಪೀಡಿಸುವ ಸಲುವಾಗಿ ಈ ವರ್ಗಾವಣೆ ಮಾಡಲಾಗಿದೆ ಎಂದು ಆರ್ಯ ಹೇಳಿದ್ದಾರೆ.

ಎಸ್.ಇ.ಸಿ.ಆರ್.ನಲ್ಲಿ ಹೆಚ್.ಎ.ಜಿ. ಹುದ್ದೆಯೊಂದು ಖಾಲಿ ಇದೆ. ಆದರೂ, ಉತ್ತರ ರೈಲ್ವೆ ವಲಯದ ಇದೇ ರೀತಿಯ ಹುದ್ದೆಗೆ ತಮ್ಮನ್ನು ವರ್ಗಾವಣೆ ಮಾಡಲಾಗಿದೆ ಎಂದು ಆರ್ಯ ಹೇಳಿದ್ದಾರೆ.

ಕೇವಲ ಮೂರು ದಿನಗಳ ಕಾಲ ಉತ್ತರ ರೈಲ್ವೆಯಲ್ಲಿ ಕೆಲಸ ಮಾಡುವ ಸಲುವಾಗಿ ರೈಲ್ವೆ ಇಲಾಖೆಯು ನನಗೆ ವರ್ಗಾವಣೆ ಹಣವಾಗಿ ಮೂರು ಲಕ್ಷ ರೂ. ನೀಡಬೇಕಿದೆ. ಇದು ಸಾರ್ವಜನಿಕ ಹಣ ಪೋಲು ಮಾಡಿದಂತೆ ಎಂದೂ ಅವರು ತಿಳಿಸಿದ್ದಾರೆ.

ಇದು ಬಡ್ತಿ ವರ್ಗಾವಣೆ ಎಂದು ತಿಳಿಸಲಾಗಿದೆ. ಆದರೆ, ಇದರಿಂದ ನನಗೆ ಯಾವುದೇ ಹೆಚ್ಚಿನ ಹಣಕಾಸು ನೆರವು ಸಿಗುವುದಿಲ್ಲ. ಆರು ತಿಂಗಳ ಹಿಂದೆಯೇ ಬಡ್ತಿ ನೀಡಬೇಕಿತ್ತಾದರೂ, ಅದನ್ನು ಬಾಕಿ ಉಳಿಸಿಕೊಳ್ಳಲಾಗಿತ್ತು. ಹೀಗಾಗಿ ಸರ್ಕಾರದ ನಿಯಮಗಳ ಪ್ರಕಾರ, ಬಾಕಿ ಇರುವ ಬಡ್ತಿಗಾಗಿ ನನಗೆ ಹೆಚ್ಚುವರಿ ಹಣ ಸಿಗಲಿದೆ ಎಂದವರು ಹೇಳಿದ್ದಾರೆ.

## ಕೊಕ್ಕನೂರಿನಲ್ಲಿ ಇಂದು ಪುಷ್ಪಗಿರಿ ಸ್ವ-ಸಹಾಯ ಸಂಘಗಳ ಬೃಹತ್ ಸಮಾವೇಶ : ಗುರು ವಂದನೆ



ಮಲೇಬೆನ್ನೂರು,ನ.27- ಕೊಕ್ಕನೂರಿನಲ್ಲಿ ಇಂದು ಶ್ರೀ ಪುಷ್ಪಗಿರಿ ಸ್ವ-ಸಹಾಯ ಸಂಘಗಳ ಹರಿಹರ ತಾಲ್ಲೂಕು ಮಟ್ಟದ ಸಮಾವೇಶ ಮತ್ತು ಗುರುವಂದನಾ ಕಾರ್ಯಕ್ರಮವನ್ನು ನಾಳೆ ದಿನಾಂಕ 28ರ ಮಂಗಳವಾರ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಕ್ಷೇತ್ರ ಪುಷ್ಪಗಿರಿ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಿಇಓ ನಾಗಯ್ಯ ತಿಳಿಸಿದರು.

ಶನಿವಾರ ಇಲ್ಲಿನ ನೀರಾವರಿ ಇಲಾಖೆಯ ಆವರಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಸಮಾವೇಶವನ್ನು ಶ್ರೀ ಕ್ಷೇತ್ರ ಪುಷ್ಪಗಿರಿ ಮಹಾಸಂಸ್ಥಾನದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಲಿದ್ದು, ಯಲವಟ್ಟಿಯ ಶ್ರೀ ಗುರು ಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ ಎಂದರು.

ಈ ಸಮಾವೇಶಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ಮಾಜಿ ಶಾಸಕರು ಸೇರಿದಂತೆ ಇತರೆ ಗಣ್ಯರಿಗೂ ಆಹ್ವಾನ ನೀಡಲಾಗಿದೆ. 40ಕ್ಕೂ ಹೆಚ್ಚು ಸ್ವ-ಸಹಾಯ ಸಂಘಗಳ ಸುಮಾರು 2 ಸಾವಿರ ಮಹಿಳಾ ಸದಸ್ಯರು ಮತ್ತು ಪುಷ್ಪಗಿರಿ ಮಠದ ಭಕ್ತರು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ರಾಜ್ಯದಲ್ಲೇ ಪ್ರಥಮ ಬಾರಿಗೆ ಪುಷ್ಪಗಿರಿ ವಿದ್ಯಾರ್ಥಿಗಳ ಸಂಘ ಮತ್ತು ಯುವ ರೈತರ ಸಂಘಗಳನ್ನು ಸಮಾವೇಶದಲ್ಲಿ ಉದ್ಘಾಟಿಸಲಿದ್ದು, ಕುಕ್ಕುವಾಡ ಮತ್ತು ಕೊಕ್ಕನೂರಿನಲ್ಲಿ ಈ ಸಂಘಗಳನ್ನು ಈಗಾಗಲೇ ರಚಿಸಲಾಗಿದೆ.

ಈ ಸಂಘಗಳ ಮೂಲಕ ವಿದ್ಯಾರ್ಥಿಗಳಿಗೆ ಹಾಗೂ ರೈತರಿಗೆ ಅಗತ್ಯ ಮಾಹಿತಿ, ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶ ಹೊಂದಿದ್ದೇವೆ ಎಂದು ನಾಗಯ್ಯ ಹೇಳಿದರು.

2020 ಜನವರಿ 4 ರಂದು ಪ್ರಾರಂಭಗೊಂಡ ಪುಷ್ಪಗಿರಿ ಗ್ರಾಮಾಭಿವೃದ್ಧಿ ಸಂಸ್ಥೆಯು ಪ್ರಸ್ತುತ ರಾಜ್ಯದ 9 ಜಿಲ್ಲೆಗಳಲ್ಲಿ 1728 ಸ್ವ-ಸಹಾಯ ಸಂಘಗಳನ್ನು ಮತ್ತು 34,540 ಮಹಿಳಾ ಸದಸ್ಯರನ್ನು ಹೊಂದಿದೆ. 2024ರ ಜನವರಿ 2 ರಂದು ಶಿಕಾರಿಪುರದಲ್ಲಿ ರಾಜ್ಯಮಟ್ಟದ ಸಮಾವೇಶವನ್ನೂ ಹಮ್ಮಿಕೊಂಡಿದ್ದೇವೆ.

ಕೊಕ್ಕನೂರಿನ ಪವನ ದೇವ ಕಲ್ಯಾಣ ಮಂಟಪದಲ್ಲಿ ಇಂದು ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಂಡಿರುವ ಈ ಸಮಾವೇಶಕ್ಕೆ ನಮ್ಮ ಸಂಘಗಳ ಸದಸ್ಯರು ಈಗಾಗಲೇ ಹರಿಹರ ತಾಲ್ಲೂಕಿನ ಪ್ರತಿ ಹಳ್ಳಿಯಲ್ಲೂ ಹೆಣ್ಣು ಮಕ್ಕಳಿಗೆ ಅರಿಶಿಣ-ಕುಂಕುಮ ನೀಡಿ, ಆಮಂತ್ರಣ ನೀಡುತ್ತಿದ್ದಾರೆ ಎಂದು ತಿಳಿಸಿದ ನಾಗಯ್ಯ ಅವರು, ನಮ್ಮ ಸಂಘಗಳ ರಚನೆ, ಸಮಾವೇಶ ಯಾವ ಯೋಜನೆಯ ವಿರುದ್ಧವೂ ಅಲ್ಲ ಎಂದು ಸ್ಪಷ್ಟಪಡಿಸಿದರು.

ಈ ಸಮಾವೇಶಕ್ಕೆ ನಂದಿಗುಡಿ ಶ್ರೀಗಳಿಗೂ ಆಹ್ವಾನ ನೀಡಲಾಗಿತ್ತು. ಆದರೆ, ಅವರು ನಮ್ಮ ಆಹ್ವಾನವನ್ನು ನಿರಾಕರಿಸಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿದ್ದ ಸಮಾಜದ ಹಿರಿಯರು ತಿಳಿಸಿದರು.

ನೊಳಂಬ ವೀರಶೈವ ಸಮಾಜದ ಮುಖಂಡರಾದ ಬಿ.ವೀರಯ್ಯ, ಜಿ.ಬೇವಿನಹಳ್ಳಿಯ ಬಿ.ಕೆ.ಮಹೇಶ್ವರಪ್ಪ, ಬಸಾಪುರದ ಕುಬೇರಸ್ವಾಮಿ, ಜಿಗಳಿಯ ಎಂ.ವಿ. ನಾಗರಾಜ್, ಜಿ.ಪಿ.ಹನುಮಗೌಡ, ಗುಡ್ಡೇಹಳ್ಳಿ ವೀರನಗೌಡ, ಕೆಂಚಿಕೊಪ್ಪದ ಗಿರೀಶ್ ಗಂಗೂರು ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

# ತೆಲಂಗಾಣದಲ್ಲಿ ಕರ್ನಾಟಕ ಸರ್ಕಾರದ ಜಾಹೀರಾತಿಗೆ ಬಿಜೆಪಿ ಆಕ್ಷೇಪ

ನವದೆಹಲಿ, ನ. 27 - ಚುನಾವಣೆ ದೃಷ್ಟಿಯಿಂದ ಕರ್ನಾಟಕದ ಕಾಂಗ್ರೆಸ್ ಸರ್ಕಾರವು, ತೆಲಂಗಾಣದ ಮಾಧ್ಯಮಗಳಿಗೆ ಜಾಹೀರಾತು ನೀಡುತ್ತಿದೆ ಎಂದು ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ನೀಡಿದೆ.

ಕೇಂದ್ರ ಸಚಿವ ಭೂಪೇಂದರ್ ಯಾದವ್ ನೇತೃತ್ವದಲ್ಲಿ ಬಿಜೆಪಿ ನಿಯೋಗ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದು, ಕಾಂಗ್ರೆಸ್ ಪಕ್ಷ ಜನಪ್ರತಿನಿಧಿ ಕಾಯ್ದೆ ಹಾಗೂ ನೀತಿ ಸಂಹಿತೆ ಉಲ್ಲಂಘಿಸಿದೆ ಎಂದು ಆರೋಪಿಸಿದೆ.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಯಾದವ್, ಕರ್ನಾಟಕ ಸರ್ಕಾರ ತೆಲಂಗಾಣದ ಇಂಗ್ಲಿಷ್ ಹಾಗೂ ತೆಲುಗು ಭಾಷೆಗಳ ಮಾಧ್ಯಮಗಳಲ್ಲಿ ಎರಡು ದಿನಗಳಿಂದ ಜಾಹೀರಾತು ನೀಡುತ್ತಿದೆ ಎಂದಿದ್ದಾರೆ. ಕಾಂಗ್ರೆಸ್ ಪಕ್ಷ ಒಂದು ರಾಜ್ಯದ ಸಾರ್ವಜನಿಕರ ಹಣವನ್ನು ಮತ್ತೊಂದು ರಾಜ್ಯದಲ್ಲಿ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಈ ಬಗ್ಗೆ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದವರು ಆಗ್ರಹಿಸಿದ್ದಾರೆ.

ಕರ್ನಾಟಕ ಸರ್ಕಾರ ಜಾಹೀರಾತುಗಳನ್ನು ಎಲ್ಲಾ ಭಾಷೆಗಳಲ್ಲಿ ಪ್ರಕಟಿಸಬೇಕು. ಆದರೆ, ಚುನಾವಣೆ ಇರುವ ರಾಜ್ಯಗಳಲ್ಲಿ ಮಾತ್ರ ಜಾಹೀರಾತು ಪ್ರಕಟಿಸುವುದು ಚುನಾವಣಾ ನಿಯಮಗಳ ಉಲ್ಲಂಘನೆ ಎಂದವರು ಹೇಳಿದ್ದಾರೆ.

## ಅಲ್ಪಸಂಖ್ಯಾತ: ವಿದ್ಯಾರ್ಥಿ ವೇತನಕ್ಕೆ ಅರ್ಜಿ

ದಾವಣಗೆರೆ, ನ. 27 - ದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿವೇತನ ಯೋಜನೆಯಡಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿ ವೇತನ ಯೋಜನೆಯಡಿ ಅರ್ಹ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 30 ಕೊನೆಯ ದಿನ. ವೆಬ್‌ಸೈಟ್ https://dom.karnataka.gov.in ನ್ನು ವೀಕ್ಷಿಸಿ ಅಥವಾ ದೂ.ಸಂ: 080-22535902 ಕರೆ ಮಾಡಿ ಹೆಚ್ಚಿನ ಮಾಹಿತಿ ಪಡೆಯಬಹುದು.

## ಬಿಇಡಿ ಕೋರ್ಸ್ ಪ್ರವೇಶಾತಿಗೆ ಅರ್ಜಿ

ದಾವಣಗೆರೆ, ನ. 27 - ಎರಡು ವರ್ಷದ ಬಿ.ಇಡಿ ಕೋರ್ಸಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವೆಬ್‌ಸೈಟ್ https://schooleducation.karnataka.gov.in ಗೆ ಭೇಟಿ ನೀಡುವ ಮೂಲಕ ಅರ್ಜಿ ಸಲ್ಲಿಸುವ ವಿಧಾನ, ಅರ್ಹತೆ, ಮೀಸಲಾತಿ ವಿವರ ಹಾಗೂ ಇತರೆ ವಿವರವನ್ನು ಪಡೆದುಕೊಳ್ಳಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 29 ಕೊನೆ ದಿನ. ಹೆಚ್ಚಿನ ಮಾಹಿತಿಗಾಗಿ ಡಯಟ್‌ನ ಹಿರಿಯ ಉಪನ್ಯಾಸಕ ಮಹಮದ್ ಅಯೂಬ್ ಸೊರಬ್ (9164489972) ಅಥವಾ ಕಚೇರಿ ದೂ.ಸಂ 08192 231156 ಗೆ ಸಂಪರ್ಕಿಸಲು ಡಯಟ್ ಪ್ರಾಚಾರ್ಯರು ಹಾಗೂ ಪದನಿಮಿತ್ತ ಉಪನಿರ್ದೇಶಕರಾದ ಗೀತಾ ತಿಳಿಸಿದ್ದಾರೆ.

## ಬಿ. ಕಲಪನಹಳ್ಳಿಯಲ್ಲಿ ಬಳಿ ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ನ.27- ತಾಲ್ಲೂಕಿನ ಬಿ.ಕಲಪನಹಳ್ಳಿ ಕ್ರಾಸ್ ಬಳಿ ನಿರ್ಮಾಣಗೊಳ್ಳುತ್ತಿರುವ ಎಸ್.ಎ. ಪ್ಯಾಲೇಸ್ ಪಕ್ಕದ ನಿವೇಶನದಲ್ಲಿ ಅಪರಿಚಿತ ಶವ ಪತ್ತೆಯಾಗಿದೆ. ಸುಮಾರು 65 ವರ್ಷ ವಯಸ್ಸಿನ ಮೃತನು ಕಣ್ಣು, ಬಾಯಿ ಮುಚ್ಚಿರುತ್ತಾರೆ. ಕೋಲು ಮುಖ, ತೆಳುವಾದ ಮೈಕಟ್ಟು ಹೊಂದಿದ್ದು, ಎಣ್ಣೆಗೆಂಪು ಬಣ್ಣದವನಾಗಿರುತ್ತಾನೆ. ಕಪ್ಪು ಬಣ್ಣದ ತುಂಬು ತೋಳಿನ ಶರ್ಟ್, ನೀಲಿ ಬಣ್ಣದ ಚಡ್ಡಿ ಧರಿಸಿರುತ್ತಾನೆ. ಕೆಂಪು ಓವರ್ ಕೋಟ್ ಆತನ ಪಕ್ಕದಲ್ಲಿದೆ. ಸಂಬಂಧ ಪಟ್ಟವರು ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆ (08192-262555, 9480803256, 08192-253100) ಗೆ ಸಂಪರ್ಕಿಸಬಹುದಾಗಿದೆ.

## ಹೊನ್ನಾಳಿ : ವಿದ್ಯುತ್ ಅವಘಡದಿಂದ ರೈತ ಸಾವು



ಹೊನ್ನಾಳಿ, ನ.27- ಇಂದು ಬೆಳಿಗ್ಗೆ 11.30ಕ್ಕೆ ತೋಟಕ್ಕೆ ನೀರು ಹಾಯಿಸಲು ಹೋದಾಗ ಬಲಮುರಿ ಗ್ರಾಮದ ವೀರಭದ್ರಸ್ವಾಮಿ (30) ಅವರಿಗೆ ವಿದ್ಯುತ್ ಅವಘಡ ಸಂಭವಿಸಿದೆ. ತಕ್ಷಣವೇ ಸರ್ಕಾರಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲು ಮಾಡಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಮೃತರಾಗಿದ್ದಾರೆ. ಮೃತ ವೀರಭದ್ರಸ್ವಾಮಿ ಅವರು ಅವಿವಾಹಿತರಾಗಿದ್ದರು. ಹೊನ್ನಾಳಿ ಪೊಲೀಸ್ ಠಾಣೆಯ ಎಎಸ್ಐ ಏಕಾಂತಪ್ಪ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ದೂರು ದಾಖಲು ಮಾಡಿಕೊಂಡಿದ್ದಾರೆ.

ಶಾಸಕ ಡಿ.ಜಿ.ಶಾಂತನಗೌಡ ಆಸ್ಪತ್ರೆಗೆ ಭೇಟಿ ನೀಡಿ ಮೃತರ ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದ್ದಾರೆ.

## ಸ್ಮಶಾನಕ್ಕೆ ಜಾಗ ನೀಡುವಂತೆ ಆಗ್ರಹಿಸಿ ಶವ ಇಟ್ಟು ಪ್ರತಿಭಟನೆ



**ನ್ಯಾಮತಿ**

ನ್ಯಾಮತಿ, ನ.27 - ನ್ಯಾಮತಿ ತಾಲ್ಲೂಕಿನ ಬಸವನಹಳ್ಳಿ ಗ್ರಾಮಕ್ಕೆ ಸ್ಮಶಾನ ಜಾಗ ನೀಡುವಂತೆ ಆಗ್ರಹಿಸಿ, ಗ್ರಾಮ ಪಂಚಾಯಿತಿಯಲ್ಲಿ ದೊಡ್ಡಪ್ಪ (65) ಮೃತಪಟ್ಟ ವ್ಯಕ್ತಿಯ ಶವ ಇಟ್ಟು ಭಾನುವಾರ ಪ್ರತಿಭಟಿಸಿದರು.

ಸ್ಮಶಾನಕ್ಕೆ ನಿಗದಿಯಾದ ಜಾಗಕ್ಕೆ ಅಂತ್ಯ ಸಂಸ್ಕಾರ ಮಾಡಲು ತೆರಳಿದಾಗ ಅಡ್ಡಿಪಡಿಸಿದ ಹಿನ್ನೆಲೆ ಗ್ರಾಮ ಪಂಚಾಯಿತಿಯ ಕಚೇರಿಯ ಒಳಗೆ ಶವ ಇಟ್ಟು ಪ್ರತಿಭಟಿಸಿ, ಶವ ಊಳಲು ಜಾಗ ನೀಡುವಂತೆ ಆಗ್ರಹಿಸಿ ಪ್ರತಿಭಟಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಡಿ.ಜಿ.ಶಾಂತನಗೌಡ, ತಹಶೀಲ್ದಾರ್ ಹೆಚ್.ಬಿ. ಗೋವಿಂದಪ್ಪ ಮತ್ತು ಕಂದಾಯ ಇಲಾಖೆಯ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಮೃತರ ಕುಟುಂಬಸ್ಥರ ಮತ್ತು ಗ್ರಾಮಸ್ಥರ ಜೊತೆ ಮಾತುಕತೆ ನಡೆಸಿದರು. ಆದರೆ, ಗ್ರಾಮಸ್ಥರು ಶವ ಸಂಸ್ಕಾರಕ್ಕೆ ಸ್ಮಶಾನದ ಜಾಗ ಗುರುತಿಸುವ ತನಕ ಶವ ಸಂಸ್ಕಾರ ನಡೆಸುವುದಿಲ್ಲ ಎಂದು ಬಿಗಿಪಟ್ಟು ಹಿಡಿದು ಕಾರ್ಯಾಲಯದ ಮುಂದೆ ಇದ್ದ ಮೃತಪಟ್ಟ ದೊಡ್ಡಪ್ಪರ ಶವವನ್ನು ಕಾರ್ಯಾಲಯದ ಒಳಗಡೆ ಇಟ್ಟಿದ್ದಾರೆ.


ಶಾಸಕ ಶಾಂತನಗೌಡ, ಗ್ರಾಮ ಪಂಚಾಯಿತಿಯ ಕಾರ್ಯಾಲಯದಲ್ಲಿ ಗ್ರಾಮಸ್ಥರಿಂದ ಸ್ಮಶಾನ ಜಾಗದ ಮಾಹಿತಿಯನ್ನು ಪಡೆದ ಬಳಿಕ ಸಂಬಂಧಿಸಿದ ಅಧಿಕಾರಿಗಳ ಬಳಿ ಮಾತನಾಡಿ, ಸ್ಮಶಾನ ಜಾಗವನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಪ್ರತಿಭಟನೆ ನಡೆಸುತ್ತಿದ್ದ ಮೃತಪಟ್ಟ ಕುಟುಂಬ ವರ್ಗ ಮತ್ತು ಗ್ರಾಮಸ್ಥರು ಅಧಿಕಾರಿಗಳ ಮಾತಿಗೆ ಮಣಿದು, ಭಾನುವಾರ ರಾತ್ರಿ 10 ಗಂಟೆಗೆ ದೊಡ್ಡಪ್ಪರ ಸ್ವಂತ ಜಮೀನಲ್ಲಿ ಶವ ಸಂಸ್ಕಾರವನ್ನು ನಡೆಸಲಾಗಿದೆ ಎಂದು ಹೇಳಲಾಗಿದೆ.

ಗ್ರಾಮಕ್ಕೆ ಸ್ಮಶಾನ ಇಲ್ಲದ ಕಾರಣ 2000 ಸಾಲಿನಲ್ಲಿ ಸರ್ವೇ ನಂಬರ್ 28 ರಲ್ಲಿ ಸ್ಮಶಾನದ ಜಾಗಕ್ಕಾಗಿ ಭೂಮಿಯನ್ನು ಮಂಜೂರಾತಿ ಮಾಡಲಾಗಿದ್ದು, ಸದರಿ ಭೂಮಿಯನ್ನು 2001ರಲ್ಲಿ ಸರ್ವೆಯನ್ನು ಮಾಡಿ ಗುರುತಿಸಿ, ಸುತ್ತ ಗುಂಡಿ ತೆಗೆಸಿ, ಸ್ಮಶಾನದ ಜಾಗವೆಂದು ನಿಗದಿಯಾಗಿದೆ. ಆದರೆ, ಜಮೀನು ಒತ್ತುವರಿ ಆಗುತ್ತಾ ಬಂದಿದೆ. ಇದರಿಂದ ಶವ ಸಂಸ್ಕಾರ ಮಾಡುವಲ್ಲಿ ಗೊಂದಲವಾಗಿದೆ ಎಂದು ಹೇಳುತ್ತಾರೆ.

ಈ ವೇಳೆಯಲ್ಲಿ ತಹಶೀಲ್ದಾರ್ ಹೆಚ್.ಬಿ. ಗೋವಿಂದಪ್ಪ, ಡಿವೈಎಸ್‌ಪಿ ಪ್ರಶಾಂತ್ ಮುನ್ನೋಳಿ, ಸಿಪಿಐ ಎನ್.ಡಿ.ರವಿ, ತಾಲ್ಲೂಕು ಪಂಚಾಯಿತಿ ಇಓ ರಾಘವೇಂದ್ರ, ಆರ್‌ಐ ಸಂತೋಷ್, ಪಿಡಿಓ ಚಿನ್ನಯ್ಯ, ಪೊಲೀಸ್ ಇಲಾಖೆಯ ಹೊನ್ನಾಳಿ ಮಂಜು ಸೇರಿದಂತೆ ಗ್ರಾಮದ ಮುಖಂಡರು ಇದ್ದರು.

**ಎಂ.ಎಸ್. ಮಲ್ಲಿಕಾರ್ಜುನಯ್ಯ ನಿಧನ**



ಚಿತ್ರದುರ್ಗ ತಾ|| ಇಸಾಮುದ್ರ ಗ್ರಾಮದ
**ಎಂ.ಎಸ್. ಮಲ್ಲಿಕಾರ್ಜುನಯ್ಯ**
ಇವರು, ದಿನಾಂಕ 27.11.2023ರ ಸೋಮವಾರ ಮಧ್ಯಾಹ್ನ 1.45ಕ್ಕೆ ನಿಧನರಾಗಿದ್ದಾರೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು, ಮೃತರ ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ : 28.11.2023ರ ಮಂಗಳವಾರ ಬೆಳಿಗ್ಗೆ 11.30ರವರೆಗೆ ದಾವಣಗೆರೆಯ ನಿಜಲಿಂಗಪ್ಪ ಬಡಾವಣೆ 'ಸಿ' ಬ್ಲಾಕ್, 2ನೇ ಮುಖ್ಯ ರಸ್ತೆ, 9ನೇ ಕ್ರಾಸ್‌ನ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಚಿತ್ರದುರ್ಗ ತಾ|| ಭರಮಸಾಗರ ಹೋಬಳಿ ಇಸಾಮುದ್ರದಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : 98447 32693, 91647 54773


**16 ನೇ ವರ್ಷದ ಪುಣ್ಯ ಸ್ಮರಣೆ**



**ದಿ|| ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪನವರು**
ನೀವು ನಮ್ಮನ್ನಗಲಿ ಇಂದಿಗೆ ಹದಿನಾರು ವರ್ಷಗಳಾದವು.
ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನೀವು ಹೇಳಿಕೊಟ್ಟ ಆದರ್ಶಗಳು,
ನಡೆ-ನುಡಿಗಳು, ನಯ-ವಿನಯಗಳೇ ನಮ್ಮ ಜೀವನದ ದಾರಿ ದೀಪವಾಗಿವೆ.
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

**ಬಸವರಾಜ ಎಂ. ಉತ್ತಂಗಿ,** ಬಿ.ಕಾಂ., ಎಲ್.ಎಲ್.ಬಿ., ಎಂ.ಕಾಂ., ಎಂ.ಎ. (ಆಡಳಿತ), ಎಂ.ಬಿ.ಎ. (ಫೈನಾನ್ಸ್), ಡಿಪ್ಲೋಮಾ ಇನ್ ಯುಸಿಬಿಎಂ,
**ಶ್ರೀಮತಿ ಜ್ಯೋತಿಶ್ರೀ ಹೆಚ್.ಸಿ.,** ಎಂ.ಕಾಂ., ಡಿಪ್ಲೋಮಾ ಇನ್ ಯುಸಿಬಿಎಂ.
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.
ಕು|| ಅಖಿಲಾ ಬಿ. ಉತ್ತಂಗಿ

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಪಿ.ಜೆ. ಬಡಾವಣೆ ವಾಸಿ
**ಶ್ರೀ ವಿರೂಪಾಕ್ಷಪ್ಪ ಸಿ. ಬೂಸ್ನೂರು**
ಇವರು ದಿನಾಂಕ 24.11.2023ರ ಬೆಳಿಗ್ಗೆ 5.30ಕ್ಕೆ ನಿಧನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 28.11.2023ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಹುಬ್ಬಳ್ಳಿಯ ಲಿಂಗರಾಜ್ ನಗರ, ಉಣಕಲ್ ಕ್ರಾಸ್ ಸಮೀಪ್ ಇರುವ ಮೃತರ ಮಗಳಾದ ಮಂಜುಳ ಮುರಗೋಡ್ ಇವರ ನಿವಾಸದಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತ ಕುಟುಂಬವರ್ಗ : ಮಕ್ಕಳಾದ : ಮಂಜುಳ, ಮಧು, ಸುಧ, ಗೀತ ಮತ್ತು ಕುಟುಂಬದವರು ಹಾಗೂ ಬಂಧು-ಮಿತ್ರರು.**

**ಮೊ : 94491 93666, 94499 79161**

ವಿ.ಸೂ. :ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**16ನೇ ವರ್ಷದ ಚಿರಸ್ಮರಣೆ**



**ಜಿ.ಎಂ. ಮಂಜುನಾಥಯ್ಯ** A.S.I.
ವಿದ್ಯಾನಗರ ಪೋಲೀಸ್ ಠಾಣೆ, ದಾವಣಗೆರೆ.
ಜನನ : 01-03-1954 ನಿಧನ : 28-11-2007

ನೀವು ನಮ್ಮನ್ನಗಲಿ ಇಂದಿಗೆ 16 ವರ್ಷಗಳು ಕಳೆದವು. ನಿಮ್ಮ ಸೃಜನಶೀಲತೆ, ಸಂಪ್ರೀತಿ, ಸಹಬಾಳ್ವೆ, ಆದರ್ಶ ಜೀವನ ನಮ್ಮೆಲ್ಲರ ಬಾಳಿನ ದಾರಿದೀಪ. ಹಚ್ಚ ಹಸಿರಾದ ನಿಮ್ಮ ನೆನಪು ಎಂದೆಂದಿಗೂ ಮರೆಯಾಗದು. ಸದಾ ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ಶ್ರೀಮತಿ ಪುಷ್ಪಾವತಿ,
ಮಕ್ಕಳು : ಕು. ಸವಿತಾ, ಶ್ರೀಮತಿ ಮಂಜುಶ್ರೀ,
ಕು. ಕೆ.ಎಂ. ಹಿರೇಮಠ

## ನಗರದಲ್ಲಿ ಇಂದು ಕೀಲು ಮೂಳೆ ತಪಾಸಣೆ

ಭಾವಸಾರ ವಿಷನ್ ಇಂಡಿಯಾ ಹಾಗೂ ಸಿಟಿ ಸೆಂಟ್ರಲ್ ಹಾಸ್ಪಿಟಲ್, ಘಟಕ-2 ಸ್ಪೈರ್ ಕ್ಲಿನಿಕ್ ಇವರ ಸಂಯುಕ್ತಾಶ್ರಯದಲ್ಲಿ ಉಚಿತ ಕೀಲು, ಮೂಳೆ, ಮಂಡಿಚಿಪ್ಪು ಮರುಜೋಡಣೆ, ಮೂಳೆ ಸಾಂದ್ರತೆ ತಪಾಸಣಾ ಶಿಬಿರವನ್ನು ಇಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 2 ರವರೆಗೆ ಹಮ್ಮಿಕೊಳ್ಳಲಾಗಿದೆ. ಬೆಂಗಳೂರಿನ ಕೀಲು ಮೂಳೆ ತಜ್ಞ ಡಾ. ಹರೀಶ್ ಪುರಾಣಿಕ್ ಅವರು ಈ ಶಿಬಿರವನ್ನು ನಡೆಸಿಕೊಡುವರು. ಮಹಾರಾಜಪೇಟೆಯ ಶ್ರೀ ವಿಠ್ಠಲ ರುಕುಮಾಯಿ ಮಂದಿರದಲ್ಲಿ ತಪಾಸಣಾ ಶಿಬಿರ ನಡೆಯಲಿದ್ದು, ವಿವರಗಳಿಗೆ ಸರಳಾ ಆಪ್ಟೆ (94483 64830), ಅಶೋಕ್ ನವಲೆ (98443 59739) ಅವರನ್ನು ಸಂಪರ್ಕಿಸಬಹುದು.


KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas



## ನಿಮಿಷಾಂಬ ದೇವಿಯ 65ನೇ ವಾರ್ಷಿಕ ಉತ್ಸವ

ದಾವಣಗೆರೆ,ನ.27- ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಸಮಾಜ, ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಮಹಿಳಾ ಸಮಾಜದಿಂದ ಶಿವಾಜಿ ನಗರದಲ್ಲಿನ ಚಿತ್ರಗಾರಗಲ್ಲಿಯಲ್ಲಿ ಶ್ರೀ ನಿಮಿಷಾಂಬ ದೇವಿಯ 65ನೇ ವಾರ್ಷಿಕ ಮಹೋತ್ಸವವನ್ನು ಭಾನುವಾರ ಆಚರಿಸಲಾಯಿತು. ಬೆಳಿಗ್ಗೆ ವಿಶೇಷ ಪೂಜೆ ನಂತರ ದೇವಿಯ ಉತ್ಸವ ಮೂರ್ತಿಯನ್ನು ರಾಜ ಬೀದಿಗಳಲ್ಲಿ ವಿವಿಧ ವಾದ್ಯಗಳೊಂದಿಗೆ ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಯಿತು.

## ಎಲೆಬೇತೂರು ಶ್ರೀ ಆಂಜನೇಯ ಸ್ವಾಮಿಗೆ ಕಾರ್ತಿಕ ಮಾಸದ ವಿಶೇಷ ಪೂಜೆ



ದಾವಣಗೆರೆ, ನ.27- ಇಲ್ಲಿಗೆ ಸಮೀಪದ ಎಲೆಬೇತೂರು ಗ್ರಾಮದ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ಶ್ರೀ ಆಂಜನೇಯ ಸ್ವಾಮಿಗೆ ಬುತ್ತಿ ಪೂಜೆ ಮಾಡಿ, ದ್ರಾಕ್ಷಿ ಹಣ್ಣು, ದಾಳಿಂಬ್ರೆ ಹಣ್ಣಿನಿಂದ ಅಲಂಕಾರ ಮಾಡಿ, ಗ್ರಾಮದ ಎಳೆಹೊಳೆ ಕುಟುಂಬದ ವಂಶಸ್ಥರು ವಿಶೇಷವಾಗಿ ಪೂಜೆ ಸಲ್ಲಿಸಿ, ಮಂಗಳಾರತಿ ಮಾಡಲಾಯಿತು. ಸಂಜೆ 7 ಕ್ಕೆ ಕಾರ್ತಿಕ ಹಚ್ಚಿ ಮಹಾಮಂಗಳಾರತಿ ಪ್ರಸಾದ ವಿನಿಯೋಗ ಎಳೆಹೊಳೆ ಕುಟುಂಬಸ್ಥರಿಂದ ನಡೆಯಿತು.

## ಸಾಣೇಹಳ್ಳಿಯಲ್ಲಿ ನಿಸಾರ್ ಅಹಮದ್ ಅವರಿಗೆ ಸನ್ಮಾನ



ದಾವಣಗೆರೆ, ನ.27- ಸಾಣೇಹಳ್ಳಿಯಲ್ಲಿ ಕಳೆದ ವಾರ ನಡೆದ ಕಾರ್ಯಕ್ರಮವೊಂದರ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವ ಮೌಲಾನಾ ಆಜಾದ್ ಅಸೋಸಿಯೇಷನ್‌ನ ನಿಸಾರ್ ಅಹಮದ್ ಅವರನ್ನು ಸಾಣೇಹಳ್ಳಿಯ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಕನಕ ಗುರು ಪೀಠದ ಶ್ರೀ ಜಗದ್ಗುರು ನಿರಂಜನಾನಂದಪುರಿ ಸ್ವಾಮೀಜಿ, ಸಚಿವ ಹೆಚ್.ಕೆ.ಪಾಟೀಲ್, ಶಾಸಕರಾದ ಎಂ.ಚಂದ್ರಪ್ಪ, ಕೆ.ಎನ್.ನವೀನ್, ಬಿ.ಪಿ.ಹರೀಶ್ ಮತ್ತು ಕನ್ನಡ ಚಲನಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

## 29ರಂದು ಜಿಲ್ಲಾ ಮಟ್ಟದ ಯುವಜನೋತ್ಸವ

ದಾವಣಗೆರೆ ನ. 27 - ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನೆಹರು ಯುವ ಕೇಂದ್ರ, ವಿಶ್ವವಿದ್ಯಾನಿಲಯ, ದೃಶ್ಯಕಲಾ ಮಹಾ ವಿದ್ಯಾಲಯ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಯುವ ಜನೋತ್ಸವ ಆಯ್ಕೆ ಪ್ರಕ್ರಿಯೆಯನ್ನು ನಾಡಿದ್ದು ದಿನಾಂಕ 29 ರಂದು ವಿಶ್ವವಿದ್ಯಾ ನಿಲಯ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದೆ.

ವಿವರಗಳಿಗಾಗಿ ಸಹಾಯಕ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಅಥವಾ ದೂ.ಸಂ: 08192-237480 ಸಂಪರ್ಕಿಸಲು ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮೀಬಾಯಿ ತಿಳಿಸಿದ್ದಾರೆ.

## ಜಾನುವಾರು ಚರ್ಮಗಂಟು ಅರ್ಜಿಗಳ ವಿಲೇವಾರಿ ಮಾಡಿದ ಸುಪ್ರೀಂ ಕೋರ್ಟ್

ನವದೆಹಲಿ, ನ. 27 - ರಾಸುಗಳಲ್ಲಿ ಕಂಡು ಬಂದಿದ್ದ ಚರ್ಮಗಂಟು ರೋಗಕ್ಕೆ ಸಂಬಂಧಿಸಿದಂತೆ ದಾಖಲಾಗಿದ್ದ ಎರಡು ಅರ್ಜಿಗಳನ್ನು ವಿಲೇವಾರಿ ಮಾಡಿರುವ ಸುಪ್ರೀಂ ಕೋರ್ಟ್, ರೋಗ ನಿವಾರಣೆಗಾಗಿ ತೆಗೆದುಕೊಂಡಿರುವ ಕ್ರಮಗಳಿಗೆ ತೃಪ್ತಿ ಇದೆ ಎಂದು ತಿಳಿಸಿದೆ.

ಗೋವುಗಳಿಗೆ ಲಸಿಕೆ ನೀಡಲಾಗಿದೆ ಹಾಗೂ ಸೋಂಕು ಹರಡುವುದನ್ನು ತಡೆಯಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ನ್ಯಾಯಾಲಯ ಹೇಳಿದೆ. ಚರ್ಮಗಂಟು ರೋಗಕ್ಕೆ ಸಂಬಂಧಿಸಿದಂತೆ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಮುಂದೆ ಅಗತ್ಯವಾದ ಸಂದರ್ಭದಲ್ಲಿ ಅರ್ಜಿದಾರರು ಕೇಂದ್ರ ಇಲ್ಲವೇ ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಬಹುದು ಎಂದು ನ್ಯಾಯಾಲಯ ತಿಳಿಸಿದೆ.

ಚರ್ಮಗಂಟು ರೋಗ ತಡೆಗಾಗಿ ಜಾನುವಾರುಗಳ ಸಾಗಣೆ ಮೇಲೆ ನಿರ್ಬಂಧ ಹೇರಲಾಗಿದೆ, ಪ್ರಾಥಮಿಕ ತಪಾಸಣೆಗೆ ವ್ಯವಸ್ಥೆ ಮಾಡಲಾಗಿದೆ. ಪ್ರಯೋಗಾಲಯ ಗಳನ್ನು ಸ್ಥಾಪಿಸಲಾಗಿದೆ. ಮಾದರಿ ಪಡೆಯುವುದನ್ನು ಹೆಚ್ಚಿಸಲಾಗಿದೆ. ಜಾನುವಾರು ಕಲ್ಯಾಣ ಮಂಡಳಿ ಹಾಗೂ ಸಮಿತಿಗಳನ್ನೂ ರಚಿಸಲಾಗಿದೆ ಎಂಬುದನ್ನು ನ್ಯಾಯಾಲಯ ಪರಿಗಣಿಸಿದೆ.




ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ. 403/4-ಎ, ಡಾ।। ಮೋದಿ ಕಣ್ಣಿನ ಆಸ್ಪತ್ರೆ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577 002. ಫೋ. : 255974

ಕರ್ನಾಟಕ ಸರ್ಕಾರದಿಂದ ಪ್ರತಿ ವರ್ಷ ನಡೆಸುವ ಸಹಕಾರ ಸಪ್ತಾಹದ ಸಂದರ್ಭದಲ್ಲಿ ಸಹಕಾರ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಅನುಪಮ ಸೇವೆಗೆ ಕೊಡಮಾಡುವ 'ಸಹಕಾರ ರತ್ನ' ಪ್ರಶಸ್ತಿಗೆ ಭಾಜನರಾಗಿರುವ ನಮ್ಮ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ನಿರಂಜನ್ ನಿಶಾನಿಮಠ್ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.



'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ

ದಿನಾಂಕ : 28-11-2023ರ ಮಂಗಳವಾರ

ಸಮಯ : ಸಂಜೆ 5-00 ಗಂಟೆಗೆ

ಸ್ಥಳ : ಡಾ।। ಶ್ರೀ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳ ಮಠ 'ಶಿವಾಚಾರ್ಯ ನಿಕೇತನ', ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.

ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ನಿರ್ದೇಶಕರುಗಳು ಮತ್ತು ಬ್ಯಾಂಕಿನ ಸಿಬ್ಬಂದಿ ವರ್ಗ




ಎನ್.ಜೆ. ಗುರುಸಿದ್ದಯ್ಯ ಅಧ್ಯಕ್ಷರು | ಕೆ.ಎಸ್. ಮಹೇಶ್ವರಪ್ಪ ನಿರ್ದೇಶಕರು | ಬಿ.ಹೆಚ್. ಪರಶುರಾಮಪ್ಪ ನಿರ್ದೇಶಕರು | ವಿಕಾಸ್‌ಕುಮಾರ್ ನಿರ್ದೇಶಕರು | ಬಂಡಿವಾಡ ಎನ್.ವಿ. ನಿರ್ದೇಶಕರು | ರವೀಂದ್ರನಾಥ್ ಕೆ.ಆರ್. ನಿರ್ದೇಶಕರು | ಶ್ರೀಮತಿ ಪಂಕಜ ವೀರಯ್ಯ ನಿರ್ದೇಶಕರು | ಶ್ರೀಮತಿ ಕೌಶಲ್ಯ ಆರ್. ನಿರ್ದೇಶಕರು | ಶ್ರೀಮತಿ ಲತಾ ಹಾಲೇಶ್ ನಿರ್ದೇಶಕರು | ಶ್ರೀ ಹೆಚ್.ವಿ. ವಿರೂಪಾಕ್ಷ ನಿರ್ದೇಶಕರು | ಶ್ರೀ ಅಭಿಷೇಕ್ ಬಿ.ಜೆ. ನಿರ್ದೇಶಕರು | ಶ್ರೀ ಎನ್. ಮಂಜುನಾಥ ವ್ಯವಸ್ಥಾಪಕರು

ವಿಶೇಷ ಸೂಚನೆ : ಬ್ಯಾಂಕ್ ಷೇರುದಾರರು ಹಾಗೂ ಗ್ರಾಹಕರುಗಳು ಈ ಸಮಾರಂಭಕ್ಕೆ ಆಗಮಿಸಬೇಕಾಗಿ ಕೋರಲಾಗಿದೆ.

ದಾವಣಗೆರೆ XI ಕ್ರಿಕೆಟ್ ಕ್ಲಬ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಂಘ

ದಿ।। ಶ್ರೀಮತಿ ಶಾಮನೂರು ಪಾರ್ವತಮ್ಮ ಶಿವಶಂಕರಪ್ಪ ಇವರ ಸವಿನೆನಪಿಗಾಗಿ

16ನೇ ಬಾರಿಗೆ ರಾಷ್ಟ್ರಮಟ್ಟದ ಹೊನಲು ಬೆಳಕಿನ ಲೀಗ್ ಕಂ ನಾಕೌಟ್ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿ









ಶಾಮನೂರು ಡೈಮಂಡ್ ಶಿವಗಂಗಾ ಕಪ್ – 2023

ದಿನಾಂಕ 28-11-2023 ರಿಂದ 03-12-2023ರ ವರೆಗೆ ಸಮಯ : ಸಂಜೆ 6.30 ಗಂಟೆಗೆ

ಸ್ಥಳ : ಜಿಲ್ಲಾ ಕ್ರೀಡಾಂಗಣ, ದಾವಣಗೆರೆ.

ಉದ್ಘಾಟನೆ :

ಡಾ. ಶಾಮನೂರು ಶಿವಶಂಕರಪ್ಪನವರು
ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು
ಗಣಿ, ಭೂ ವಿಜ್ಞಾನ, ತೋಟಗಾರಿಕೆ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು





ಸರ್ವರಿಗೂ ಸುಸ್ವಾಗತ

✦ ಜನಪ್ರಿಯ ಕ್ರಿಕೆಟ್ ಕ್ಲಬ್ ✦ ಶಿವಗಂಗಾ ಗ್ರೂಪ್ಸ್
✦ ಸ್ಟೇಡಿಯಂ ಫ್ರೆಂಡ್ಸ್ ಗ್ರೂಪ್ ಹಾಗೂ ಐ.ಸಿ.ಬಿ. ಗೆಳೆಯರ ಬಳಗ

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಸಪ್ಲೈಯರ್ ಕೆಲಸಕ್ಕೆ ನುರಿತ ಯುವಕರು ಬೇಕಾಗಿದ್ದಾರೆ.
ಕೆಲಸದ ಸಮಯ :
12:00 PM to 10:00 PM.
**95388 96927**

**ಬೇಕಾಗಿದ್ದಾರೆ**
ಹಿಂದಿ ಮತ್ತು ಇಂಗ್ಲಿಷ್ ಮಾತನಾಡಲು, ಓದಲು ಬರೆಯಲು, ಭಾಷಾಂತರಿಸಲು ಬರುವ ಮಹಿಳಾ ಆಫೀಸ್ ರಿಸಪ್ಷನಿಸ್ಟ್ ಬೇಕಾಗಿದ್ದಾರೆ.
**ಶ್ರೀ ಗುರು ತಿಪ್ಪೇರುದ್ರಸ್ವಾಮಿ ಎಂಟರ್ ಪ್ರೈಸಸ್**
ಕಾಳಿದಾಸ ಸರ್ಕಲ್ ಹೈಟೆಕ್ ಆಸ್ಪತ್ರೆ ರಸ್ತೆ, ದಾವಣಗೆರೆ.
**86605 96332, 70909 42152**

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
**99863 61250**
**80730 24690**

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
**ಮೊ : 98450-35710**

**ಬೇಕಾಗಿದ್ದಾರೆ**
ನಗರದ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು SSLC/PUC ಫೇಲಾದ ಯುವಕರು ಹಾಗೂ ಲೈಸೆನ್ಸ್ ಹೊಂದಿರುವವರು ಡ್ರೈವರ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಖುದ್ದಾಗಿ ಸಂಪರ್ಕಿಸಿ
**ಪ್ರತೀಕ್ ಎಂಟರ್ ಪ್ರೈಸಸ್**
ನಾಗನೂರು- ಶಾಮನೂರು ರಸ್ತೆ, ಶಾಮನೂರು, ದಾವಣಗೆರೆ.
**94481 10287**

**ನಿವೇಶನ ಮಾರಾಟಕ್ಕಿದೆ**
ರಾಣೇಬೆನ್ನೂರಿನಲ್ಲಿ ಬಸ್ ನಿಲ್ದಾಣಕ್ಕೆ ಹತ್ತಿರ ಇರುವ ಪ್ರತಿಷ್ಠಿತ ಬಡಾವಣೆಯಲ್ಲಿ ಐದು ಗುಂಟೆ ಅಳತೆಯ ನಿವೇಶನ ತುರ್ತಾಗಿ ಮಾರಲಿದೆ, ಆಸಕ್ತಿ ಇರುವವರು ಸಂಪರ್ಕಿಸಿ.
**72594 03990**

**ಮನೆ ಬಾಡಿಗೆಗೆ ಇದೆ**
2 ಬೆಡ್ ರೂಂ ಇರುವ First Floor ಮನೆ ಬಾಡಿಗೆಗೆ ಇದೆ. #1382/A6 ಸರಸ್ವತಿ ನಗರ, ಬಿ ಬ್ಲಾಕ್, ಕೆಎಸ್‌ಎಸ್ ಸ್ಕೂಲ್ ಹತ್ತಿರ.
ಸಂಪರ್ಕಿಸಿ : ಧರ್ಮರಾಜ್
**80956 76644**

**ಕೆಲಸಗಾರರು ಬೇಕಾಗಿದ್ದಾರೆ**
ಫೈನಾನ್ಸ್ ಕಂಪನಿಗೆ SSLC ಪಾಸ್ ಅಥವಾ ಫೇಲ್. ಸ್ವಂತ ವಾಹನ ಹೊಂದಿದ ಹುಡುಗರು ಬೇಕಾಗಿದ್ದಾರೆ.
**9036925278, 99649 98887**

**WANTED**
Girls required for data Entry and billing work.
Boys required for supervision job at Food Mart Supermarket.
Quali : Any Degree.
**Mob : 9886463531**

**AVAILABLE FOR RENT**
Office / Commercial Space
Size : 20x45 Basement, Ground floor & First floor,
Address : Lawyer Road, K.B Extesnion, Davanagere.
Contact :
**98442 61046, 87225 81400**

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯ ಸುತ್ತಮುತ್ತಲಿನಲ್ಲಿ 08 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯವಿರುತ್ತದೆ.
ಅಸೋಸಿಯೇಟೆಡ್ ಎಂಟರ್‌ಪ್ರೈಸಸ್, ದಾವಣಗೆರೆ.
**9916929713, 9060545500**
**9739089022, 7411113888**

**ಕೆಲಸಕ್ಕೆ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
**90367 34919**

**ಬಾಡಿಗೆಗೆ ಇದೆ**
ದಾವಣಗೆರೆ ಎಸ್.ಎಸ್. ಲೇ ಔಟ್ 'ಬಿ' ಬ್ಲಾಕ್, ಶಾರದಾಂಬ ಸರ್ಕಲ್ ಹತ್ತಿರ, ಕುಂದುವಾಡ ಕೆರೆ ರೋಡ್ ಹತ್ತಿರ, (# 3827) 'Bhari Plaza'ದಲ್ಲಿ 25'x65' ಅಳತೆಯ ಎರಡನೇಯ ಮಹಡಿ ಬಾಡಿಗೆಗೆ ಇದೆ. ಸಂಪರ್ಕಿಸಿ :
**ಮೊ. : 96865 52600**

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
**ಹರ್ಷ ಹಾರ್ಡ್‌ವೇರ್ & ಪೇಂಟ್ಸ್ (Harsha Hardware & Paints)**
ಸುಭಾಷ್ ರೋಡ್, ಅಶೋಕ ಚಿತ್ರಮಂದಿರದ ಹತ್ತಿರ, ದಾವಣಗೆರೆ.

**WANTED**
Female Candidated having the degree of commerce is required to work in auditor office. Contact:
B.G. Basavarajappa
#43H, SJJM Complex, Jayadeva Circle, Hadadi Road, DVG.
**99001 42052**

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆ ಸುತ್ತ-ಮುತ್ತ ಹೊಸ ಬಡಾವಣೆಯಲ್ಲಿ 30x40 ಪಶ್ಚಿಮ-ದಕ್ಷಿಣ ಕಾರ್ನರ್ 30x40 ಪಶ್ಚಿಮ, 30x40 ಪೂರ್ವ 30x50 ಪೂರ್ವ, 30x50 ಉತ್ತರ
**ಸ್ವಾಮಿ ಏಜೆಂಟ್, ವಿದ್ಯಾನಗರ**
**97421 44715**

**ಬೇಕಾಗಿದ್ದಾರೆ**
ಹೋಳಿಗೆ, ರೊಟ್ಟಿ ಮಾಡುವವರು ಬೇಕಾಗಿದ್ದಾರೆ. ಸಂಪರ್ಕಿಸಿ :
**ಮನೆ ಅಡುಗೆ ಹಳ್ಳಿ ಊಟ**
ವಿದ್ಯಾನಗರ, ದಾವಣಗೆರೆ.
**63635-43487**

**ಬೇಕಾಗಿದ್ದಾರೆ**
ಮಂಡಿಪೇಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
**99162-36521**

**ಮನೆ ಮಾರಾಟಕ್ಕಿದೆ**
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 12ನೇ ಕ್ರಾಸ್, 5ನೇ ಮೇನ್, #1978/3, ಶ್ರೀನಿಧಿ 30x50 ನಿವೇಶನದಲ್ಲಿ ನಿರ್ಮಿಸಿರುವ 1200 ಚ. ವಿಸ್ತೀರ್ಣ, 2 BHK ಮನೆ ಮಾರಾಟಕ್ಕಿದೆ.
**ಶ್ರೀ ಡಿ. ವೆಂಕಟೇಶ್ ರಾವ್**
**95357 81770**

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x47 ಪೂರ್ವ, 30x40 ಪಶ್ಚಿಮ, ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ ಅಕ್ಕ-ಪಕ್ಕ, ವಿನಾಯಕ ಬಡಾವಣೆಯಲ್ಲಿ 30x35 ಪಶ್ಚಿಮ, 40x60 ಪೂರ್ವ.
**ಸ್ವಾಮಿ ಏಜೆಂಟ್, ವಿದ್ಯಾನಗರ**
**97421 44715**

**AVOID MOSQUITOES**
Mosquito Net For Doors & Windows
**SRI GOWRI ENTERPRISES**
# 7C2, 4th Cross, Near Shaneshwara Temple, Karur Industrial Area, P.B. Road, Davangere-6
**72049 94628**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

**ದಾವಣಗೆರೆ : 2 & 3 ರಂದು**
**ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.**
**ಡಾ|| ಎಚ್.ಆಯ್. ದೊಡ್ಡಮನಿ** (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
**M:9740523710**

**ಹೆಸರು ಬದಲಾವಣೆ**
ನಾನು ಶ್ರೀಮತಿ ನಯ್‌ನ ಖಾನ್ ಬಿನ್ ಮಹೇಂದ್ರ ನಾಯ್ಕ, ವಯಸ್ಸು 28 ವರ್ಷ, ವಾಸ : ಕರೇಕಟ್ಟೆ ಗ್ರಾಮ, ಚನ್ನಗಿರಿ ತಾಲ್ಲೂಕು ದಾವಣಗೆರೆ ಜಿಲ್ಲೆ ವಾಸಿಯಾದ ನಾನು ದೇವರ ಹೆಸರಿನಲ್ಲಿ ಪ್ರಮಾಣೀಕರಿಸುವುದೇನೆಂದರೆ. ನಾನು ಈ ಮೇಲ್ಕಂಡ ವಿಳಾಸದಲ್ಲಿ ಖಾಯಂ ವಾಸವಾಗಿರುತ್ತೇನೆ. ನನ್ನ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿ, ಆಧಾರ್ ಕಾರ್ಡ್ ಮತ್ತು ಇತರೆ ಎಲ್ಲಾ ದಾಖಲೆಗಳಲ್ಲಿ ನನ್ನ ಹೆಸರು ನಯನ ಬಾಯಿ ಎಂ. ಎಂದು ನಮೂದಾಗಿರುತ್ತದೆ. ಆದರೆ ನಾನು ನನ್ನ ವೈಯಕ್ತಿಕ ಕಾರಣದಿಂದ ನನ್ನ ಹೆಸರನ್ನು ನಯ್‌ನ ಖಾನ್ ಎಂದು ಬದಲಾಯಿಸಿಕೊಂಡಿದ್ದು, ಇದಕ್ಕೆ ನನ್ನ ಸಂಪೂರ್ಣ ಒಪ್ಪಿಗೆ ಇರುತ್ತದೆ. ಆದ್ದರಿಂದ ಸದರಿ ನನ್ನ ಎಲ್ಲಾ ದಾಖಲೆಗಳಲ್ಲಿ ನನ್ನ ಹೆಸರನ್ನು ನಯನ ಬಾಯಿ ಎಂ. ಎಂಬುವುದರ ಬದಲಾಗಿ ನಯ್‌ನ ಖಾನ್ ಎಂದು ತಿದ್ದುಪಡಿ ಮಾಡಿಕೊಡಬೇಕೆಂದು ಈ ಮೂಲಕ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸುತ್ತೇನೆ.
ಸಹಿ/- ಪ್ರಮಾಣಕರ್ತರ ಸಹಿ

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
**94492 02888, 86608 03384**


## ಹರಿಹರದಲ್ಲಿ ಇಂದು ಜಾನಪದ ನೃತ್ಯ ಸ್ಪರ್ಧೆ

ಗಿರಿಯಮ್ಮ ಪ್ರಥಮ ದರ್ಜೆ ಮಹಿಳಾ ಕಾಲೇಜು ವತಿಯಿಂದ 'ಸಾಮಾಜಿಕ ಸಾಮರಸ್ಯದೆಡೆಗೆ ಯುವಜನತೆ ಹಾಗೂ ಸ್ವಚ್ಛ ಭಾರತ ಅಭಿಯಾನ'ದ ಭಾಗವಾಗಿ ಕಾಲೇಜು ಮಟ್ಟದ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರವು ವಾಸನ ಗ್ರಾಮದ ಶ್ರೀ ಮಾರ್ಕಂಡೇಶ್ವರ ಸಮುದಾಯ ಭವನದಲ್ಲಿ ನಿನ್ನೆ ಆರಂಭಗೊಂಡಿದ್ದು, ಡಿಸೆಂಬರ್ 2 ರವರಿಗೆ ನಡೆಯಲಿದೆ ಎಂದು ಗಿರಿಯಮ್ಮ ಕಾಲೇಜು ಪ್ರಾಂಶುಪಾಲ ಡಾ.ಜಿ.ಬಿ. ಗಂಗಾಧರಪ್ಪ ತಿಳಿಸಿದ್ದಾರೆ.

ಇಂದು ಬೆಳಗ್ಗೆ 6-30 ಕ್ಕೆ ಶ್ರೀಮತಿ ಗಾಯತ್ರ ಜಗದೀಶ್ ಇವರಿಂದ ಧ್ವಜಾರೋಹಣ. ಮಧ್ಯಾಹ್ನ 3 ಗಂಟೆಗೆ ಸಮೂಹ ಜಾನಪದ ನೃತ್ಯ ಸ್ಪರ್ಧೆ ನಡೆಯಲಿದೆ. ನಾಳೆ ಬುಧವಾರ ಬೆಳಗ್ಗೆ 6-30ಕ್ಕೆ ಪಿ. ಓಂಕಾರಪ್ಪನವರಿಂದ ಧ್ವಜಾರೋಹಣ. 9 ಗಂಟೆಗೆಯಿಂದ ಬರಡು ದನ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಮಧ್ಯಾಹ್ನ 3 ಗಂಟೆಗೆ ಉಪನ್ಯಾಸಕ ಪಿ. ಅಣ್ಣೇಶ್‌ರಿಂದ ಉಪನ್ಯಾಸ. ಸಂಜೆ ವಾಸನ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.


**ಅಡುಗೆಯವರು ಬೇಕಾಗಿದ್ದಾರೆ**
ಹರಿಹರ, ವಿದ್ಯಾನಗರದ 60 feet ರಸ್ತೆಯಲ್ಲಿರುವ ಮನೆಗೆ ಮಾಂಸಹಾರಿ, ಸಸ್ಯಹಾರಿ ಅಡುಗೆ ಮಾಡಲು ಅನುಭವಿ ಅಡುಗೆಯವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ.
**83109 67670, 81055 47878**

**FOR RENT**
2BHK house in ground floor available for rent.
# 3683/1A, 7th cross, ward no 40, Anjneya badavane, near Nethravathi ladies hostel, Davanagere.
**99728 00102**
**96113 50058**

**ಬೇಕಾಗಿದ್ದಾರೆ**
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 15000 (ESI, PF, ಸೌಲಭ್ಯವಿರುತ್ತದೆ) ಸ್ಥಳ: ಮೈಸೂರು.
**98450 10281**

**To-Let**
3 BHK Furnished Flat For Rent at Shakunthala Grand Apartment MCC "B" Block, Davangere.
**78929 07579**
**9901322702**

**2 ಬೆಡ್ ರೂಂ ಮನೆ ಬಾಡಿಗೆಗೆ**
ಡೋ. ನಂ. 240/2, 4ನೇ ಮೇನ್, ಪಿ.ಜೆ. ಬಡಾವಣೆ, ನರ್ಸರಿ ಜೈನ್ ವಿದ್ಯಾಲಯದ ಹತ್ತಿರ, ರಾಂ ಅಂಡ್ ಕೋ ಸರ್ಕಲ್ ಬಳಿ 2 ಬೆಡ್ ರೂಂನ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
**93809 21540, 89719 49707**


# ಜನತಾದರ್ಶನದಲ್ಲಿ ದೊರೆ ಎದುರು ಸಣ್ಣ ಅಹವಾಲುಗಳ ಸರಮಾಲೆ

ಬೆಂಗಳೂರು, ನ. 27 - ಸಚಿವರು, ಜಿಲ್ಲಾಧಿಕಾರಿಗಳು ಕೆಳಹಂತದ ಸಿಬ್ಬಂದಿ ಜನರ ಸಮಸ್ಯೆಗಳಿಗೆ ಸ್ಪಂದಿಸದ ಕಾರಣ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ವೃದ್ಧಾಪ್ಯವೇತನ ಸೇರಿದಂತೆ ಅನೇಕ ಸಣ್ಣ-ಪುಟ್ಟ ಅಹವಾಲುಗಳನ್ನು ಜನತಾ ದರ್ಶನದ ವೇಳೆ ಪರಿಹರಿಸುವ ಸ್ಥಿತಿ ಇಂದು ಎದುರಾಯಿತು.

ಆರು ತಿಂಗಳ ಮಗುವಿನಿಂದ ಹಿಡಿದು 97 ವರ್ಷದ ವೃದ್ಧರೂ ಕಿಲೋ ಮೀಟರ್‌ವರೆಗೆ ಸರದಿ ಸಾಲಿನಲ್ಲಿ ನಿಂತು ಮುಖ್ಯಮಂತ್ರಿ ಅವರ ಬಳಿ ಸಮಸ್ಯೆ ಬಗೆಹರಿಸಿಕೊಂಡರು.

ಪಂಚಾಯತ್ ಕಾರ್ಯದರ್ಶಿಗಳು ಮಾಡಬೇಕಾದ ಸಣ್ಣ-ಪುಟ್ಟ ಕೆಲಸವನ್ನೂ ಮುಖ್ಯಮಂತ್ರಿ ಅವರೇ ಖುದ್ದಾಗಿ ಆದೇಶ ಮಾಡುವ ಮೂಲಕ ಜನತಾ ದರ್ಶನದಲ್ಲಿ ಸ್ಪಂದಿಸಿದರು.

ತಾವು ಅಧಿಕಾರಕ್ಕೆ ಬಂದ ನಂತರ ಮುಖ್ಯಮಂತ್ರಿ ಅವರು ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಸರ್ಕಾರದ ಎಲ್ಲಾ ಕಾರ್ಯದರ್ಶಿಗಳ ಜೊತೆಗೂಡಿ, ಬೀದರ್‌ನಿಂದ ಚಾಮರಾಜನಗರದ ವರೆಗೂ ಬಂದಿದ್ದ ಜನರ ದುಃಖ-ದುಮ್ಮಾನಗಳನ್ನು ಆಲಿಸಿ, ಸ್ಥಳದಲ್ಲೇ ಪರಿಹರಿಸಿದರು.

ಸ್ಥಳದಲ್ಲೇ ಪರಿಹಾರ ಒದಗಿಸದಲಾಗದ ಅರ್ಜಿಗಳಿಗೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಸಮಯ ನಿಗದಿ ಪಡಿಸಿ ಪರಿಹರಿಸಿ ತಮ್ಮ ಗಮನಕ್ಕೆ ತರುವಂತೆ ಆದೇಶಿಸಿದರು.

ಕೆಲವು ಸಮಸ್ಯೆಗಳಿಗೆ ಸಂಜೆ ವೇಳೆಗೆ ಪರಿಹಾರ ದೊರಕಿಸಿ, ತಮ್ಮ ಸಚಿವಾಲಯಕ್ಕೆ ತಿಳಿಸುವಂತೆ ಕಟ್ಟುನಿಟ್ಟಿನ ಆದೇಶ ಮಾಡಿದರು.

ಅರ್ಜಿಗಳ ಸ್ವೀಕಾರಕ್ಕೆ ಪ್ರತ್ಯೇಕ 20 ಕೌಂಟರ್‌ಗಳನ್ನು ನಿರ್ಮಿಸಿ, ಅಲ್ಲಿಗೆ ಬಂದಂತಹವರ ಸಮಸ್ಯೆಗಳನ್ನು ಮುಖ್ಯಕಾರ್ಯದರ್ಶಿ ಸೇರಿದಂತೆ ವಿವಿಧ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಂದ ಬಗೆಹರಿಸುವ ವ್ಯವಸ್ಥೆ ಮಾಡಲಾಗಿತ್ತು.

ಇದೇ ಕಾಲಕ್ಕೆ ಜಿಲ್ಲಾಧಿಕಾರಿಗಳೂ ಸೇರಿದಂತೆ ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳು ಜನತಾ ದರ್ಶನ ಮುಗಿಯುವವರೆಗೂ ತಮ್ಮ ಕಚೇರಿಯಲ್ಲೇ ಇದ್ದು, ಮುಖ್ಯಮಂತ್ರಿ ಹಾಗೂ ಹಿರಿಯ ಅಧಿಕಾರಿಗಳು ನೀಡುವ ಆದೇಶವನ್ನು ಪಾಲಿಸುವಂತಹ ಏರ್ಪಾಡು ಮಾಡಿದ್ದರು.

ವೃದ್ಧಾಪ್ಯ ವೇತನವಲ್ಲದೆ, ಜಾತಿ ಪ್ರಮಾಣ ಪತ್ರ, ಮನೆ ಮಂಜೂರು, ಭೂ ತಕರಾರು, ವಿಕಲಚೇತನರ ಸಮಸ್ಯೆ, ಅನಾರೋಗ್ಯ ಪೀಡಿತರು ತಮ್ಮ ಅಹವಾಲು ಮತ್ತು ದೂರುಗಳನ್ನು ಮುಖ್ಯಮಂತ್ರಿ ಬಳಿ ತೋಡಿಕೊಂಡರು.

### ಪಂಚಾಯ್ತಿ ಕಾರ್ಯದರ್ಶಿಗಳು ಮಾಡಬೇಕಾದ ಸಣ್ಣ - ಪುಟ್ಟ ಕೆಲಸಗಳಿಗೂ ಮುಖ್ಯಮಂತ್ರಿ ಖುದ್ದು ಆದೇಶ



### ಶಿಕ್ಷಕರ ಹುದ್ದೆಗೆ ವಿವಾಹಿತೆಯರ ಪರದಾಟ

ಶಿಕ್ಷಕರ ನೇಮಕಾತಿಯಲ್ಲಿ ಸುಮಾರು 1,800 ವಿವಾಹಿತ ಮಹಿಳಾ ಅಭ್ಯರ್ಥಿಗಳು ತಂದೆಯ ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದರು. ಆದರೆ, ದಾಖಲೆ ಪರಿಶೀಲನೆಯ ಸಂದರ್ಭದಲ್ಲಿ ವಿವಾಹಿತರಾಗಿದ್ದರು. ಈ ಮಹಿಳೆಯರ ಜಾತಿ ಮೀಸಲಾತಿಯನ್ನು ರದ್ದುಗೊಳಿಸಿ ಸಾಮಾನ್ಯ ವರ್ಗಕ್ಕೆ ಸೇರಿಸಲಾಗಿದೆ.

ತಾವು ನೇಮಕಾತಿ ಅಧಿಸೂಚನೆಯನ್ವಯ ಮಾಹಿತಿಯನ್ನು ಭರ್ತಿ ಮಾಡಿದ್ದು, ಅದರಲ್ಲಿ ಕೇವಲ ಆರ್.ಡಿ. ಸಂಖ್ಯೆಯನ್ನು ಮಾತ್ರ ನಮೂದಿಸಲು ಅವಕಾಶವಿದೆ. ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ತಮ್ಮನ್ನು ಮೀಸಲಾತಿಯಿಂದ ಹೊರಗಿಟ್ಟು, ಸಾಮಾನ್ಯ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿದ್ದು, ಇದನ್ನು ಸರಿಪಡಿಸುವಂತೆ ಕೆಲವು ಅಭ್ಯರ್ಥಿಗಳು ಮನವಿ ಸಲ್ಲಿಸಿದರು. ಈ ಸಮಸ್ಯೆಯನ್ನು ಆದ್ಯತೆಯ ಮೇರೆಗೆ ಪರಿಶೀಲಿಸಿ ಬಗೆಹರಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು.

ಪಂಚಾಯತ್ ಮತ್ತು ಕಂದಾಯ ಇಲಾಖೆ ಕಾರ್ಯದರ್ಶಿಗಳು ನಮ್ಮ ಸಮಸ್ಯೆ ಬಗೆಹರಿಸದ ಕಾರಣ ನೂರಾರು ಕಿಲೋ ಮೀಟರ್ ದೂರದಿಂದ ಬಂದಿದ್ದೇವೆ ಎಂಬ ಅಳಲನ್ನು ಜನರು ತೋಡಿಕೊಂಡರು. ಮುಖ್ಯಮಂತ್ರಿ ಅವರು ಅಧಿಕಾರ ವಹಿಸಿಕೊಂಡ ದಿನದಿಂದಲೇ ಜನರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಅನೇಕ ಬಾರಿ ಕಟ್ಟಾದೇಶ ಮಾಡಿದ್ದರೂ ಅದನ್ನು ಪಾಲನೆ ಮಾಡಿರಲಿಲ್ಲ ಎಂಬುದು ಇಂದಿನ ಜನತಾ ದರ್ಶನದಲ್ಲಿ ಬಿಂಬಿತಗೊಂಡಿತು.

ಬೀದಿ ಬದಿ ವ್ಯಾಪಾರಿಗಳಿಗೆ ಪೊಲೀಸರು ಮತ್ತು ಅಧಿಕಾರಿಗಳು ಕಿರುಕುಳ ನೀಡುತ್ತಾರೆ. ಇದನ್ನು ತಪ್ಪಿಸಿ ಎಂದು ವೃದ್ಧ ವ್ಯಾಪಾರಿ ಮಹಿಳೆಯೊಬ್ಬರು ಅಲವತ್ತುಕೊಂಡರು.

ಮತ್ತೆ ಕೆಲವರು ಮನೆ ಕಂದಾಯ ಕಟ್ಟಿದರೂ ಸ್ಥಳೀಯ ಸಂಸ್ಥೆಗಳು ದಂಡ ವಿಧಿಸುತ್ತಿವೆ, ಈ ಬಗ್ಗೆ ಕೇಳಲು ಹೋದರೆ ಅಧಿಕಾರ ದರ್ಪದಿಂದ ವರ್ತಿಸುತ್ತಾರೆ ಎಂಬ ದೂರು ಕೇಳಿಬಂದಿತು.

ಅಧಿಕಾರಿಗಳು ಮತ್ತು ಪೊಲೀಸರು ಗೂಂಡಾಗಳ ಜೊತೆ ಶಾಮೀಲಾಗಿ ನಮ್ಮ ಭೂಮಿ ಹೊಡೆಯಲು ಯತ್ನ ಮಾಡುತ್ತಿದ್ದಾರೆ ಎಂದರೆ, ಮತ್ತೆ ಕೆಲವರು ನಮ್ಮ ಭೂಮಿಯನ್ನು ಸಂಬಂಧಿಕರೇ ಒತ್ತುವರಿ ಮಾಡಿಕೊಂಡಿದ್ದಾರೆ ಬಿಡಿಸಿಕೊಡಿ ಎಂದು ಅಹವಾಲು ಸಲ್ಲಿಸಿದರು.

ಹೃದಯ ಬೇನೆ, ಕಿಡ್ನಿ, ಅಂಗವೈಕಲ್ಯ ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಮತ್ತು ಪರಿಹಾರಕ್ಕೆ ಮಾಡಿದ ಮನವಿಗಳಿಗೆ ಮುಖ್ಯಮಂತ್ರಿ ಸ್ಥಳದಲ್ಲೇ ಸ್ಪಂದಿಸಿದರು.

# ಹರಿಹರದಲ್ಲಿ ಇಂದು ಮಾದಿಗ ಸಮಾಜದ ಧರಣಿ



ಹರಿಹರ, ನ, 27- ನಗರದ ಮಾದಿಗ ಸಮಾಜ ತಾಲ್ಲೂಕು ಘಟಕದ ವತಿಯಿಂದ ಮಾದಿಗ ಸಮಾಜದ ಒಳಮೀಸಲಾತಿ ಕಲ್ಪಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲು ನಾಳೆ ದಿನಾಂಕ 28 ರ ಮಂಗಳವಾರ ಬೆಳಗ್ಗೆ 10 ಗಂಟೆಗೆ ಸಾಂಕೇತಿಕ ಧರಣಿ ಮೂಲಕ ಶಾಸಕರಿಗೆ ಮತ್ತು ತಹಶೀಲ್ದಾರ್‌ರವರಿಗೆ ಮನವಿಯನ್ನು ಸಲ್ಲಿಸಲಾಗುತ್ತದೆ ಎಂದು ತಾಲ್ಲೂಕು ಮಾದಿಗ ಸಮಾಜದ ಅಧ್ಯಕ್ಷ ಎಂ.ಎಸ್. ಆನಂದ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಒಳ ಮೀಸಲಾತಿ ಕಲ್ಪಿಸಲು ರಚಿಸಲಾಗಿದ್ದ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಿ ಜಾರಿಗೊಳಿಸಬೇಕು. ಹಿಂದುಳಿದ ವರ್ಗಗಳ ಆಯೋಗ ರಚಿಸಿದ್ದ, ಸಾಮಾಜಿಕ ಶೈಕ್ಷಣಿಕ ಜಾತಿ ಗಣತಿಯ ಕಾಂತರಾಜ್ ವರದಿ ಸಿದ್ದವಾಗಿದ್ದು, ಕೂಡಲೇ ಸ್ವೀಕರಿಸಿ ಸಮಾಜಕ್ಕೆ ನ್ಯಾಯ ಒದಗಿಸಬೇಕು ಆದರೆ ಸರ್ಕಾರ ಇದನ್ನು ಮಾಡುವಲ್ಲಿ ವಿಳಂಬ ಮಾಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸಂಘವು ಪ್ರತಿಯೊಂದು ತಾಲ್ಲೂಕಿನಲ್ಲಿ ಮನವಿಯನ್ನು ಅರ್ಪಿಸುವಂತೆ ಆದೇಶ ಮಾಡಿದ್ದರಿಂದ ದಿ. 28 ರಂದು ಮಂಗಳವಾರ ನಗರದ ಗಾಂಧಿ ವೃತ್ತದಲ್ಲಿ ಸಾಂಕೇತಿಕ ಧರಣಿ ಮೂಲಕ ತಹಶೀಲ್ದಾರ್ ಕಚೇರಿಗೆ ತೆರಳಿ ಮನವಿಯನ್ನು ಅರ್ಪಿಸಲಾಗುತ್ತದೆ.

ಈ ಸಂದರ್ಭದಲ್ಲಿ ಮಾದಿಗ ಸಮಾಜದ ಮುಖಂಡರಾದ ಎಲ್.ಬಿ. ಹನುಮಂತಪ್ಪ, ಹೆಚ್.ಶಿವಪ್ಪ, ಶ್ರೀನಿವಾಸ್, ಸಿದ್ಧಾರೂಡ, ನಾಗೇಂದ್ರಪ್ಪ ರಾಜನಹಳ್ಳಿ ಇತರರು ಹಾಜರಿದ್ದರು.

# ಸಮಸ್ಯೆ ವಿಧಾನಸೌಧಕ್ಕೆ ಬಂದರೆ ಕ್ರಮ : ಸಿಎಂ

**(1ನೇ ಪುಟದಿಂದ)** ನೀವು ಏನು ಕೆಲಸ ಮಾಡುತ್ತೀರಿ, ಅರ್ಜಿಗಳ ವಿಲೇವಾರಿ ಮಾಡದಿರುವುದೇ ಭ್ರಷ್ಟಾಚಾರದ ಮತ್ತೊಂದು ರೂಪ ಎಂದಿದ್ದಾರೆ. ಎಲ್ಲ ಜಿಲ್ಲಾ ಸಚಿವರಿಗೆ ಪತ್ರ ಬರೆದಿದ್ದೆ, ಜಿಲ್ಲೆಗಳಲ್ಲಿ ಜನಸ್ಪಂದನ ಕಾರ್ಯಕ್ರಮ ಮಾಡಿ ನನಗೆ ವರದಿ ಸಲ್ಲಿಸಬೇಕೆಂದು ತಿಳಿಸಲಾಗಿತ್ತು. ಕೆಲವು ಜಿಲ್ಲೆಗಳಿಂದ ಮಾತ್ರ ವರದಿ ಬಂದಿದೆ. ಉಳಿದ ಜಿಲ್ಲೆಗಳಿಂದ ವರದಿ ಬಂದಿಲ್ಲ. ಇದನ್ನು ಸಹಿಸಲ್ಲ ಎಂದು ತಿಳಿಸಿದರು.

ಅನೇಕ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಥಳದಲ್ಲಿ ಪರಿಹಾರ ನೀಡಲು ಸಾಧ್ಯವಾಗುತ್ತದೆ. ಕೆಲವು ಅರ್ಜಿಗಳನ್ನು ಕೂಡಲೇ ತೀರ್ಮಾನ ಮಾಡಲು ಆಗುವುದಿಲ್ಲ. ಸಮಯ ಬೇಕಾಗುತ್ತದೆ. ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಬೇಕು. ಇಲ್ಲವಾದರೆ ಬೆಳೆಯುತ್ತಲೇ ಹೋಗುತ್ತವೆ.

ಇಂದು ಬಂದ ಅರ್ಜಿಗಳಲ್ಲಿ ಬಹುತೇಕವಾಗಿ ಕಂದಾಯ, ಪೊಲೀಸ್ ಇಲಾಖೆ, ಗೃಹಲಕ್ಷ್ಮಿ ಯೋಜನೆ, ಬಿಬಿಎಂಪಿ, ಪಿಂಚಣಿ, ಗ್ರಾಚ್ಯುಟಿ ಇತ್ಯರ್ಥ, ವಸತಿ ಕೊಡಿ, ಉದ್ಯೋಗ ಕೊಡಿಸಿ ಎಂಬ ಮನವಿಗಳು ಬಂದಿವೆ ಎಂದು ಹೇಳಿದರು.

ವಿಶೇಷವಾಗಿ ಅಂಗವಿಕಲರು ಉದ್ಯೋಗ ಕೊಡಿಸಿ, ತ್ರಿಚಕ್ರ ವಾಹನ ಕೊಡಿಸಿ ಎಂದು ಮನವಿ ಸಲ್ಲಿಸಿದ್ದಾರೆ. 4000 ತ್ರಿಚಕ್ರ ವಾಹನ ಒದಗಿಸಲಾಗಿದೆ ಎಂದೂ ಹೇಳಿದರು.

ವಿಶೇಷವಾಗಿ ಜಿಲ್ಲಾಧಿಕಾರಿಗಳು ಸ್ಥಳೀಯವಾಗಿಯೇ ಸಮಸ್ಯೆ ಬಗೆಹರಿಸಲು ಸಾಧ್ಯವಾಗುತ್ತದೆ. ಖಾತೆ, ಪಹಣಿ, ಪೋಡಿ ಮಾಡಲು ನನ್ನ ಬಳಿ ಬರಬೇಕೆ? ಎಂದು ಪ್ರಶ್ನಿಸಿದರು. ಜಿಲ್ಲಾಧಿಕಾರಿಗಳು, ತಹಶೀಲ್ದಾರರು, ಉಪವಿಭಾಗಾಧಿಕಾರಿಗಳು ಕೆಲಸ ಮಾಡಿದರೆ ಜನರು ಬೆಂಗಳೂರಿಗೆ ಬರುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಕಟ್ಟುನಿಟ್ಟಿನ ಸೂಚನೆಯನ್ನು ಎಲ್ಲ ಜಿಲ್ಲಾಧಿಕಾರಿಗಳಿಗೆ ನೀಡುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಗಳಿಗೆ ಸೂಚಿಸಿದ್ದೇನೆ ಎಂದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಆಸ್ಪತ್ರೆ, ಪೊಲೀಸ್ ಠಾಣೆ, ಹಾಸ್ಟೆಲ್‌ಗಳು ಮತ್ತಿತರೆ ಸ್ಥಳಗಳಿಗೆ ಭೇಟಿ ನೀಡಬೇಕು. ಜನರ ಸಮಸ್ಯೆ ಬಗೆಹರಿಸಬೇಕು.

ವಿಳಂಬ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ ಕೂಡಲೇ ಜನರಿಗೆ ಸ್ಪಂದಿಸಲು ಸೂಚಿಸಿದರು. ಕಾನೂನು ರೀತ್ಯ ಮಾಡಲು ಸಾಧ್ಯವಾಗದಿದ್ದರೆ, ಹಿಂಬರಹ ನೀಡಬೇಕು.

ಇಂದು ಸ್ವೀಕರಿಸಿದ ಅರ್ಜಿಗಳನ್ನು ಸಂಬಂಧ ಪಟ್ಟ ಅಧಿಕಾರಿಗಳಿಗೆ ಕಳುಹಿಸಲಾಗುವುದು. ಹದಿನೈದು ದಿನದೊಳಗೆ ಇವುಗಳನ್ನು ವಿಲೇವಾರಿ ಮಾಡಬೇಕು ಎಂದು ತಿಳಿಸಿದರು.

ಕನಿಷ್ಠ ಮೂರು ತಿಂಗಳಿಗೊಮ್ಮೆ ಜನಸ್ಪಂದನ ಕಾರ್ಯಕ್ರಮ ಮಾಡುತ್ತೇನೆ. ಮುಂದಿನ ಬಾರಿ ಹೆಚ್ಚು ಜನ ಬಂದರೆ, ತಳಹಂತದ ಅಧಿಕಾರಿಗಳು ಕೆಲಸ ಸರಿಯಾಗಿ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುವುದು ಹಾಗೂ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಇಂದು ಮೂರುವರೆ ಸಾವಿರ ಅರ್ಜಿ ಸ್ವೀಕರಿಸಲಾಗಿದೆ. ಇವುಗಳನ್ನು ಪರಿಶೀಲಿಸಿ, ಕಾನೂನು ರೀತ್ಯ ಪರಿಹಾರ ನೀಡಬೇಕು. ಸಾಧ್ಯವಾಗದಿದ್ದರೆ ಹಿಂಬರಹ ನೀಡಬೇಕು.

ತಳಹಂತದ ಅಧಿಕಾರಿಗಳು ಅರ್ಜಿಯನ್ನು ಇತ್ಯರ್ಥಪಡಿಸಿದ್ದಾರೆಯೇ ಇಲ್ಲವೇ ಎಂಬ ಬಗ್ಗೆ ಮುಖ್ಯಮಂತ್ರಿ ಕಚೇರಿಗೆ ಮಾಹಿತಿ ನೀಡಬೇಕು ಎಂದು ಸಿದ್ದರಾಮಯ್ಯ ಸೂಚಿಸಿದ್ದಾರೆ.

### ಜನತಾದರ್ಶನದಲ್ಲೇ ಸಿಎಂ ಸಿದ್ದರಾಮಯ್ಯ ಊಟ



**ಬೆಂಗಳೂರು, ನ. 27 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನತಾ ದರ್ಶನದ ವೇಳೆ ದೊಡ್ಡ ಸಂಖ್ಯೆಯಲ್ಲಿ ಜನರು ಅಹವಾಲುಗಳನ್ನು ಹೊತ್ತು ತಂದಿದ್ದರು. ಪ್ರತಿಯೊಬ್ಬರ ಸಮಸ್ಯೆ ಆಲಿಸಲು ಆದ್ಯತೆ ನೀಡಿದ ಸಿದ್ದರಾಮಯ್ಯ, ಜನತಾ ದರ್ಶನದ ಸ್ಥಳದಲ್ಲೇ ಸ್ವಲ್ಪ ಸಮಯದಲ್ಲೇ ಊಟ ಮಾಡಿ ಮತ್ತೆ ಜನರ ಸಮಸ್ಯೆ ಆಲಿಸುವಲ್ಲಿ ತೊಡಗಿದರು.**

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಆಡಳಿತ ಕಚೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ

## ಸ್ಥಿರ ಸೊತ್ತಿನ ಬಹಿರಂಗ ಹರಾಜು ಪ್ರಕಟಣೆ

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇವರು ಪಡೆದುಕೊಂಡಿರುವ ಈ ಕೆಳಗಿನ ಡಿಕ್ರಿ ಅಮಲ್ಜಾರಿ ಕ್ರಮದಲ್ಲಿ ಬ್ಯಾಂಕಿಗೆ ಜಪ್ತಿ/ ಆಧಾರ ಮಾಡಲ್ಪಟ್ಟಿರುವ ಸ್ಥಿರ ಸೊತ್ತನ್ನು ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಘನ ನ್ಯಾಯಾಲಯದ ಆದೇಶ ಸಂಖ್ಯೆ ಡಿಆರ್/ಡಿವಿಜಿ/ದಾವಾ/103/2019-20ರ ಮೇರೆಗೆ ಈ ಕೆಳಗೆ ಕಾಣಿಸಿರುವ ಸ್ಥಿರಾಸ್ತಿಯನ್ನು ಛಡ ಸವಾಲು ಮೂಲಕ ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ ನಿಯಮ 441 ಇವರ ಷರತ್ತಿಗೊಳಪಟ್ಟು ಹರಾಜು ಮಾಡಲಾಗುವುದು.

| ಕ್ರ. ಸಂ. | ಬಾಕಿದಾರರ ಹೆಸರು ಮತ್ತು ವಿಳಾಸ | ಸದರಿ ಅಮಲ್ಜಾರಿ ಕ್ರಸಂ. ಮತ್ತು ಇ.ಪಿ. ಖಾತೆಯಿಂದ ಬರಬೇಕಾದ ಬಾಕಿ ಮೊತ್ತ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸೊತ್ತುಗಳ ವಿವರ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಳ, ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | ಮೆ॥ ಎನ್.ಎನ್. ಏಜೆನ್ಸಿಸ್, ಮಾಲೀಕರು 1) ಶ್ರೀಮತಿ ಪುಷ್ಪಾ ಜಿ.ಎಸ್ ಕೋಂ ಲೇಟ್ ಸಿದ್ದೇಶ್ ಜಿ.ಎಸ್. 2) ನಿಖಿಲ್ ಜಿ.ಎಸ್ ಬಿನ್ ಲೇಟ್ ಸಿದ್ದೇಶ್ ಜಿ.ಎಸ್., 3) ನಿತಿನ್ ಜಿ.ಎಸ್. ಬಿನ್ ಲೇಟ್ ಸಿದ್ದೇಶ್ ಜಿ.ಎಸ್. ಮನೆ ನಂ.573, ಮಹದೇವ, 6ನೇ ಮುಖ್ಯರಸ್ತೆ, 6ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ. | ಇ.ಪಿ.ಸಂಖ್ಯೆ 18/2022-23 ರೂ. 4,87,18,073-00 (ರೂಪಾಯಿ ನಾಲ್ಕು ಕೋಟಿ ಎಂಬತ್ತೇಳು ಲಕ್ಷದ ಹದಿನೆಂಟು ಸಾವಿರದ ಎಪ್ಪತ್ಮೂರು ಮಾತ್ರ) (ದಿನಾಂಕ 09-10-2023 ಕ್ಕೆ ಇದ್ದಂತೆ + ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು) | ದಾವಣಗೆರೆ ನಗರದ ಎಂ.ಸಿ.ಸಿ. ಬಿ ಬ್ಲಾಕ್, 6ನೇ ಮುಖ್ಯರಸ್ತೆ, 5ನೇ ಕ್ರಾಸ್‌ನಲ್ಲಿ ಬರತಕ್ಕ ಡೋರ್ ನಂ. 3581 ರ ಖಾಲಿ ನಿವೇಶನ ಇದರ ಅಳತೆ 140X80 ಅಡಿಗಳು. ಸೊತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ : ಖಾಸಗಿ ಕಟ್ಟಡ, ಪಶ್ಚಿಮಕ್ಕೆ : 6ನೇ ಮುಖ್ಯರಸ್ತೆ, ಉತ್ತರಕ್ಕೆ : ಖಾಲಿ ನಿವೇಶನ, ದಕ್ಷಿಣಕ್ಕೆ : ಖಾಸಗಿ ಕಟ್ಟಡ. | ದಿನಾಂಕ 20-12-2023 ನೇ ಬುಧವಾರ ಮಧ್ಯಾಹ್ನ 12-00 ಗಂಟೆಗೆ ಹರಾಜಿಗೆ ಒಳಪಟ್ಟ ಸೊತ್ತಿನ ಮುಂಭಾಗದಲ್ಲಿ. | 1,00,000=00 |

**ಹರಾಜಿನ ಷರತ್ತುಗಳು** :- (1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ಮುಂಗಡ ಠೇವಣಿಯನ್ನು ಡಿ.ಡಿ./ನಗದು ಮುಖಾಂತರ ಪಾವತಿಸಬೇಕು(ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಆಧಾರ ಕಾರ್ಡ್ ಹಾಗೂ ಪಾನ್ ಕಾರ್ಡ್ ಪ್ರತಿಯೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಹರಾಜಿಗಿಟ್ಟ ಸ್ಥಿರ ಸ್ವತ್ತಿನ ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ವ್ಯತ್ಯಾಸ ಉಂಟಾದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. (7) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (8) ಒಂದು ವೇಳೆ ಸುಸ್ತಿ ಸಾಲಗಾರರು 45 ದಿನಗಳೊಳಗಾಗಿ ಇತರೆ ಎಲ್ಲಾ ಖರ್ಚುಗಳೊಂದಿಗೆ ಸಂಪೂರ್ಣ ಹಣ ಪಾವತಿ ಮಾಡಿದಾಗ ಹರಾಜಿನಲ್ಲಿ ಒಪ್ಪಿಕೊಂಡ ಖರೀದಿದಾರರಿಗೆ ಶೇಕಡ 5 ರಂತೆ ಮಾರಾಟ ಮಾಡಿದ ಹಣಕ್ಕೆ ಸಮಾಧಾನಾರ್ಥವಾಗಿ ಪರಿಹಾರವನ್ನು ಕರ್ನಾಟಕ ಸಹಕಾರಿ ನಿಯಮ 60, ನಿಯಮ 38(4)(1)ರ ಪ್ರಕಾರ ಸುಸ್ತಿಸಾಲಗಾರರಿಂದ ಕೊಡಿಸಲಾಗುವುದು. (9) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (10) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ, ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (11) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (12) **ಯಾವುದೇ ಕಾರಣ ನೀಡದೇ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳ ಅಧೀನಕ್ಕೆ ಒಳಪಟ್ಟಿರುತ್ತದೆ.** (13) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಮಾರಾಟಾಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11-00 ಘಂಟೆಯಿಂದ ಸಂಜೆ 5-00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು. (14) ಯಾವುದೇ ತಕರಾರಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಪ್ರಕಾರ ಇತ್ಯರ್ಥಗೊಳಿಸಲಾಗುವುದು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಆದೇಶದ ಮೇರೆಗೆ

ದಿನಾಂಕ : 27-11-2023 ಸಹಿ/-
ಸ್ಥಳ : ದಾವಣಗೆರೆ
**ಬಸವರಾಜ್ ಎಂ.**
ಪ್ರಧಾನ ವ್ಯವಸ್ಥಾಪಕರು

ಸಹಿ/-
ಜ್ಯೋತಿ ಮಾಳಾಪುರ, ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ, (ನಿ.441)
ಬಾಪೂಜಿ ಕೋ ಆಪರೇಟಿವ್ ಬ್ಯಾಂಕ್ ಲಿ.,ದಾವಣಗೆರೆ.


**CHANGE OF NAME**
I, **Gulzar Parveen Syed Anwar** (Old Name) resident of # 101, 1st Main, 1st Cross, B.T. Layout, Davanagere-577001, Karnataka, India. I have changed my name as Gulzar Parveen (New Name) Vide affidavit dt 23-11-2023, sworn before Notary Davanagere. In future all my dealings & transactions will be in my new name.
Sd/- Gulzar Parveen

**ಪ್ರವೇಶ ಪ್ರಕಟಣೆ**
ಎಸ್.ಎಸ್. ಎಲ್.ಸಿ. ಪಿ.ಯು.ಸಿ, ಬಿ.ಎ., ಬಿ.ಕಾಂ., ಎಂ.ಬಿ.ಎ., ಎನ್.ಟಿ.ಸಿ. ನರ್ಸರಿ ಟೀಚರ್ಸ್ ಟ್ರೈನಿಂಗ್
**ಶ್ರೀ ಗಂಗೋತ್ರಿ ಡಿಸ್ಟೆನ್ಸ್ ಎಜುಕೇಶನ್,**
ಗಾಂಧಿ ಸರ್ಕಲ್, ಮೋತಿ ಸ್ವೀಟ್ಸ್, ಟ್ರೆಂಡ್ಸ್ ಪಕ್ಕ, ದಾವಣಗೆರೆ.
**86602 35013**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**91132 85992**

**0% Interest, EMI Available***
ನಮ್ಮಲ್ಲಿ ಎಲ್ಲಾ ಕಂಪನಿಯ ಮೊಬೈಲ್‌ಗಳು ಕಂತುಗಳ ಮೂಲಕ
* ಆಕರ್ಷಕ ಬೆಲೆಯಲ್ಲಿ ಖರೀದಿಸಬಹುದು.
**ಗಣೇಶ್ ಮೊಬೈಲ್ಸ್**
ಹದಡಿ ರೋಡ್, ದಾವಣಗೆರೆ.
**99807 28444**

# ವರದಿಗಾರರು ಸುದ್ದಿ ಹೋರುವ ಹಮಾಲರಲ್ಲ : ರಂಜಾನ್ ದರ್ಗಾ



ದಾವಣಗೆರೆ, ನ.27- ವರದಿಗಾರರು ಸುದ್ದಿಯನ್ನು ಹೋರುವ ಹಮಾಲರಲ್ಲ ಆದರೆ ಪ್ರಸ್ತುತ ವ್ಯವಸ್ಥೆ ನಮ್ಮನ್ನು ಆ ಮಟ್ಟಕ್ಕೆ ತಂದು ನಿಲ್ಲಿಸಿದೆ ಎಂದು ಹೇಳಿದರು.

ಪತ್ರಕರ್ತರಿಗೆ ನೌಕರಿ ಗ್ಯಾರಂಟಿ ಇಲ್ಲದಿರುವುದು, ಕೆಲಸದ ಒತ್ತಡ ಹೆಚ್ಚಾಗಿ ಚಿಕ್ಕವಯಸ್ಸಿನಲ್ಲೇ ಹಾರ್ಟ್ ಅಟ್ಯಾಕ್‌ನಂತಹ ಹೃದಯ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುತ್ತಿರುವುದು ದುಃಖದ ವಿಷಯ. ಇದರ ಜೊತೆ ವ್ಯವಸ್ಥೆಯೂ ಸಹ ವರದಿಗಾರನಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡದೇ, ಕೇವಲ ಸುದ್ದಿ ಹೋರುವ ಹಮಾಲಿಯಂತೆ ನೋಡುತ್ತಿರುವುದು ವಿಷಾದನೀಯ ಎಂದರು.

ಪ್ರತಿಯೊಬ್ಬ ವರದಿಗಾರನಿಗೆ ಅವನದ್ದೇ ಆದ ಒಂದು ದೃಷ್ಟಿಕೋನ ಇರುತ್ತದೆ. ಆದರೆ ಆ ದೃಷ್ಟಿಕೋನವನ್ನು ವ್ಯವಸ್ಥೆ ಕೊಲೆ ಮಾಡುತ್ತಿದೆ. ನಾವು ಎಲ್ಲಿ ಕೆಲಸ ಮಾಡುತ್ತಿದ್ದೇವೆ ಅವರೇ ನಮ್ಮ ಆತ್ಮಗೌರವವನ್ನು ಪ್ರಶ್ನೆ ಮಾಡುತ್ತಿದ್ದಾರೆ ಎಂದರು. ಮಹಾನಗರ ಪಾಲಿಕೆ ಮೇಯರ್ ವಿನಾಯಕ್ ಪೈಲ್ವಾನ್, ಪಾಲಿಕೆ ಸದಸ್ಯ ಕೆ.ಚಮನ್ ಸಾಬ್ ಸೇರಿದಂತೆ ಇತರರು ಈ ಸಂದರ್ಭದಲ್ಲಿದ್ದರು.

## ಕಡ್ಲೇಬಾಳ್ ಮಧ್ವಾಂಜನೇಯ ಸ್ವಾಮಿಗೆ ಬೆಣ್ಣೆ ಅಲಂಕಾರ



ದಾವಣಗೆರೆ, ನ.27- ಧಾತ್ರೀ ಹವನದ ಪ್ರಯುಕ್ತ ಕಡ್ಲೇಬಾಳಿನಲ್ಲಿರುವ ಶ್ರೀ ಮಧ್ವಾಂಜನೇಯ ಸ್ವಾಮಿಗೆ ಬೆಣ್ಣೆ ಅಲಂಕಾರ ಮಾಡಲಾಯಿತು ಹಾಗೂ ಕಾರ್ತಿಕ ಮಾಸದ ಪ್ರಯುಕ್ತ ಪಂಚಾಮೃತ ಅಭಿಷೇಕ, ವಾಯುಸ್ತುತಿ ಪುನಶ್ಚರಣ, ಭಜನಾ ಕಾರ್ಯಕ್ರಮವನ್ನು ಶ್ರೀ ರಾಮಚಂದ್ರಾಚಾರ್ ಮಣ್ಣೂರ್ ಇವರಿಂದ ಪ್ರವಚನ ನಡೆಯಿತು.

# 7ನೇ ವೇತನ ಆಯೋಗ, ಹಳೆ ಪಿಂಚಣಿಗಾಗಿ ನೌಕರರ ಪರ ದನಿ

ದಾವಣಗೆರೆ, ನ. 27 - ಮುಂಬರುವ ಬೆಳಗಾವಿ ಅಧಿವೇಶನದಲ್ಲಿ 7ನೇ ವೇತನ ಆಯೋಗ ಹಾಗೂ ಹಳೆ ಪಿಂಚಣಿ ಯೋಜನೆ ಜಾರಿಗಾಗಿ ದನಿ ಎತ್ತುವುದಾಗಿ ಶಾಸಕ ಕೆ.ಎಸ್. ಬಸವಂತಪ್ಪ ತಿಳಿಸಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಇಂದು ಆಯೋಜಿಸಲಾಗಿದ್ದ ಸಚಿವರು - ಶಾಸಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆಯುತ್ತಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ 7ನೇ ವೇತನ ಆಯೋಗ ಹಾಗೂ ಹಳೆ ಪಿಂಚಣಿ ಯೋಜನೆಗಳಿಗಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಈ ಬಾರಿ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಬಜೆಟ್ ಮಂಡಿಸಲು ಸಾಧ್ಯವಾಗಿಲ್ಲ. ಮುಂದಿನ ಬಜೆಟ್ ವೇಳೆ ನೌಕರರ ಬೇಡಿಕೆಗಳು ಈಡೇರಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ಬೆಳಗಾವಿ ಅಧಿವೇಶನದಲ್ಲಿ ನೌಕರರ ಬೇಡಿಕೆಗಳ ಪರ ದನಿ ಎತ್ತುವುದಾಗಿ ಭರವಸೆ ನೀಡಿದರು. ರೈತರ ಸಮಸ್ಯೆಗಳಿಗೆ ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸಬೇಕು. ಇದರಿಂದ ಜನಪ್ರತಿನಿಧಿಗಳ ಮೇಲಿನ ಒತ್ತಡ ಕಡಿಮೆಯಾಗುತ್ತದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಬಿ.ಪಿ. ಹರೀಶ್, ಹಿಂದಿನ ಬಸವರಾಜ ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ನೌಕರರ ಹಲವಾರು ಬೇಡಿಕೆಗಳನ್ನು ಈಡೇರಿಸಲಾಗಿತ್ತು. ಇನ್ನೂ ಕೆಲ ಬೇಡಿಕೆಗಳಿದ್ದು, ಅವುಗಳ ಈಡೇರಿಕೆಗಾಗಿ ನೌಕರರ ಪರ ಇರುವುದಾಗಿ ಭರವಸೆ ನೀಡಿದರು. ಸರ್ಕಾರಿ ಯೋಜನೆಗಳನ್ನು ಜನರಿಗೆ ತಲುಪಿಸಿದಾಗ, ಜನಪ್ರತಿನಿಧಿಗಳಿಗೆ ಸನ್ಮಾನಿಸುವುದಕ್ಕಿಂತ ಹೆಚ್ಚಿನ ಸಂತೋಷವಾಗುತ್ತದೆ ಎಂದೂ ಅವರು ಹೇಳಿದರು.



ಸರ್ಕಾರಿ ನೌಕರರ ಸಂಘದ ಕಾರ್ಯಕ್ರಮದಲ್ಲಿ ಶಾಸಕ ಬಸವಂತಪ್ಪ ಭರವಸೆ

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ವೀರೇಶ ಎಸ್. ಒಡೇನಪುರ, ಸರ್ಕಾರಿ ನೌಕರರು ಗ್ಯಾರಂಟಿಗಳನ್ನು ಮನೆ ಮನೆಗೆ ತಲುಪಿಸುವಲ್ಲಿ ಶ್ರಮಿಸಿದ್ದಾರೆ. ನೌಕರರ ಹಳೆಯ ಪಿಂಚಣಿ ಹಾಗೂ 7ನೇ ವೇತನ ಆಯೋಗಗಳ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಹೇಶ್ ಮಾಶ್ಯಾಳ್ ಅವರು 'ಪ್ರಜಾಸ್ನೇಹಿ ಆಡಳಿತದಲ್ಲಿ ನೌಕರರ ಪಾತ್ರ' ಎಂಬ ಕುರಿತು ಉಪನ್ಯಾಸ ನೀಡಿದರು.

ವೇದಿಕೆ ಮೇಲೆ ಶಾಸಕರಾದ ಡಿ.ಜಿ. ಶಾಂತನಗೌಡ, ಶಿವಗಂಗಾ ಬಸವರಾಜ್, ನೌಕರರ ಸಂಘದ ಪದಾಧಿಕಾರಿಗಳಾದ ಮಲ್ಲಿಕಾರ್ಜುನ ಬಳ್ಳಾರಿ, ಎಂ.ವಿ. ರುದ್ರಪ್ಪ, ಎಸ್. ಬಸವರಾಜ್, ನಲ್ಕುದುರೆ ಸದಾನಂದ, ಗುರುಮೂರ್ತಿ, ಪಿ.ಆರ್.ತಿಪ್ಪೇಸ್ವಾಮಿ, ಮಂಜಮ್ಮ ಬಿ. ಪಾಲಾಕ್ಷಿ, ಹೆಚ್. ಬಸವರಾಜ್, ತಿಪ್ಪೇಸ್ವಾಮಿ, ಎ.ಕೆ. ಭೂಮೇಶ್, ಶಶಿಧರ, ನಾಗರಾಜ್, ನಿಂಗಪ್ಪ, ಆರ್.ಎನ್. ಪಾಟೀಲ್, ಕೆ.ಎಲ್. ಹೆಚ್. ಸ್ವಾಮಿ, ಶಿವಾನಂದ, ಸಿದ್ದಲಿಂಗ ಸ್ವಾಮಿ, ಪರಶುರಾಮಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಸದಾಶಿವ ಆಯೋಗದ ವರದಿ ಜಾರಿ ತಡೆಗೆ ಸಜ್ಜಾಗೋಣ: ಇಮ್ಮಡಿ ಸಿದ್ಧರಾಮೇಶ್ವರ ಶ್ರೀ



ದಾವಣಗೆರೆ, ನ. 27- ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ಬೆಳಗಾವಿ ಚಳಗಾಲದ ಅಧಿವೇಶದಲ್ಲಿ ಮಂಡನೆಯಾಗದಂತೆ ತಡೆಯಲು ಭೋವಿ, ಬಂಜಾರ, ಕೊರಚ, ಕೊರಮ ಸಮುದಾಯದವರು ಶಕ್ತಿ ಪ್ರದರ್ಶಿಸಲು ಸಿದ್ಧರಾಗಬೇಕೆಂದು ಚಿತ್ರದುರ್ಗ ಭೋವಿ ಗುರು ಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಕರೆ ನೀಡಿದರು.

ನಗರದ ರೋಟರಿ ಬಾಲಭವನದ ಸಿ. ಕೇಶವಮೂರ್ತಿ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಕರ್ನಾಟಕದ ಮೀಸಲಾತಿ ಸಂರಕ್ಷಣಾ ಒಕ್ಕೂಟದ ವಿಭಾಗೀಯ ಮಟ್ಟದ ಸಮಾಲೋಚನಾ ಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಭೋವಿ, ಲಂಬಾಣಿ, ಕೊರಚ-ಕೊರಮ ಸಮುದಾಯ ಸೇರಿದಂತೆ ವಿವಿಧ ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಿಂದ ಹೊರಗಿಡಬೇಕೆಂಬುದು ಮೂಲ ಆಶಯವಾಗಿದೆ. ಆದ್ದರಿಂದ ನಾವೆಲ್ಲರೂ ಐಕ್ಯತೆ ಪ್ರದರ್ಶಿಸುವ ಅವಶ್ಯಕತೆ ಇದೆ ಎಂದರು.

ಹೈಕೋರ್ಟ್ ವಕೀಲ ಎನ್. ಅನಂತನಾಯ್ಕ ಮಾತನಾಡಿ, ಸದಾಶಿವ ಆಯೋಗದ ವರದಿಯನ್ನು ಹಿಂದಿನ ಬಿಜೆಪಿ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಮುಂದಾಗಿರುವ ಕಾರಣ ಕಳೆದ ಚುನಾವಣೆಯಲ್ಲಿ 42 ಕ್ಷೇತ್ರಗಳಲ್ಲಿ ಬಿಜೆಪಿ ಸೋಲು ಅನುಭವಿಸಿತು. ಅದೇ ತಪ್ಪನ್ನು ಈಗಿನ ಕಾಂಗ್ರೆಸ್ ಸರ್ಕಾರ ಮಾಡಲು ಮುಂದಾಗಿದೆ. ಹಾಗಾಗಿ ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಲು ಸಿದ್ದರಾಗಬೇಕಿದೆ ಎಂದು ಹೇಳಿದರು.

ವಕೀಲರೂ, ಒಕ್ಕೂಟದ ರಾಘವೇಂದ್ರ ನಾಯ್ಕ ಪ್ರಾಸ್ತಾವಿಕವಾಗಿ ಮಾತನಾಡಿ, ಬೆಳಗಾವಿ ಅಧಿವೇಶನದಲ್ಲಿ ಈ ವಿಷಯ ಮಂಡನೆಗೆ ಬಂದರೆ ನಮ್ಮ ಪರ ಧ್ವನಿ ಎತ್ತುವಂತೆ ಎಲ್ಲಾ ಶಾಸಕರು, ಜಿಲ್ಲಾ ಮಂತ್ರಿಗಳಲ್ಲಿ ಮನವಿ ಮಾಡೋಣ ಎಂದು ಸಲಹೆ ನೀಡಿದರು.

ಮುಖ್ಯಮಂತ್ರಿ, ಉಪಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ವರದಿ ಮಂಡನೆ ಮಾಡದಂತೆ ಒತ್ತಡ ಹಾಕೋಣ ಎಂದರು.

ಸಭೆಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಡಾ. ವೈ. ರಾಮಪ್ಪ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಎನ್. ಜಯದೇವನಾಯ್ಕ, ಶ್ರೀನಿವಾಸ, ನಂಜಾನಾಯ್ಕ, ಜಯಣ್ಣ, ಕೆ.ಆರ್. ಮಲ್ಲೇಶನಾಯ್ಕ, ಚಿನ್ನಸಮುದ್ರ ಶೇಖರನಾಯ್ಕ, ಕುಬೇರನಾಯ್ಕ, ಲಕ್ಷ್ಮಣ ರಾಮಾವತ್ ಮತ್ತಿತರರು ಭಾಗವಹಿಸಿದ್ದರು.

### ಪಕ್ಷಭೇದ ಮರೆತು ಹೋರಾಟಕ್ಕೆ ಸಜ್ಜಾಗಬೇಕು

ಬೆಳಗಾವಿ ಅಧಿವೇಶನದಲ್ಲಿ ಸದಾಶಿವ ಆಯೋಗದ ವರದಿ ಮಂಡಿಸುವುದಾಗಿ ಸಚಿವ ಕೆ.ಹೆಚ್.ಮುನಿಯಪ್ಪ ಮತ್ತಿತರರು ಹೇಳುತ್ತಿರುವುದನ್ನು ನೋಡಿದರೆ ಸಮುದಾಯದವರಲ್ಲಿ ಆತಂಕ ಎದುರಾಗಿದೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.
ಪಕ್ಷಭೇಧ ಮರೆತು ಹೋರಾಟ ಮಾಡಬೇಕಾಗಿದೆ. ಅದಕ್ಕೂ ಮಣಿಯದಿದ್ದರೆ ಹಿಂದಿನ ಬಿಜೆಪಿಗೆ ಕಲಿಸಿದ ಪಾಠವನ್ನೇ ಕಾಂಗ್ರೆಸ್ ಪಕ್ಷಕ್ಕೂ ಕಲಿಸಬೇಕಾಗಿದೆ ಎಂದರು.

### ಉತ್ತಮ ನಿರ್ಧಾರಕ್ಕೆ ಮುಂದಾಗೋಣ : ಡಾ. ವೈ. ರಾಮಪ್ಪ

ಎಸ್ಸಿ ಮೀಸಲಾತಿ ವಿಷಯದಲ್ಲಿ ಎಲ್ಲಾ ಸೋದರ ಸಮುದಾಯದ ಹಿರಿಯ ಮುಖಂಡರೊಂದಿಗೆ ಸಮಾಲೋಚನೆ ನಡೆಸಿ, ಯಾವುದೇ ಸಂಘರ್ಷಕ್ಕೆ ಒಳಗಾಗದಂತೆ ಮೀಸಲಾತಿ ಹೆಚ್ಚಳಕ್ಕೆ ಸರ್ಕಾರದ ಮೇಲೆ ಒತ್ತಡ ತರಲು ಪ್ರಯತ್ನ ಮಾಡಬೇಕೆಂದು ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಡಾ. ವೈ. ರಾಮಪ್ಪ ಸಲಹೆ ನೀಡಿದರು.
ಪರಿಶಿಷ್ಟ ಜಾತಿಯ 101 ಜಾತಿಗಳೊಂದಿಗೆ ಚರ್ಚಿಸಿದ ನಂತರ ವರ್ಗೀಕರಣ ವಿಷಯದ ಬಗ್ಗೆ ತೀರ್ಮಾನ ಕೈಗೊಂಡು ಶಾಂತಿಯುತವಾಗಿ ಮುಂದುವರೆಯೋಣವೆಂದು ಹೇಳಿದರು.

# ಕೇಂದ್ರದ ಯೋಜನೆಗಳಿಂದ ಹೊರಗುಳಿದವರನ್ನು ಯೋಜನಾ ವ್ಯಾಪ್ತಿಗೆ ತರಲು ಸಂಸದರ ಸೂಚನೆ



ದಾವಣಗೆರೆ, ನ.27- ಕೇಂದ್ರ ಸರ್ಕಾರದ ಯೋಜನೆಗಳಿಂದ ಹೊರಗುಳಿದವರನ್ನು ಗುರುತಿಸಿ, ಅವರನ್ನು ಯೋಜನೆ ವ್ಯಾಪ್ತಿಗೆ ತರುವುದು ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಉದ್ದೇಶವಾಗಿದೆ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಹೇಳಿದರು.

ನಗರದ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಸೋಮ ವಾರ ವಿಕಸಿತ ಭಾರತ ಸಂಕಲ್ಪ ಯಾತ್ರೆಗೆ ಚಾಲನೆ ನೀಡಿ ಅವರು ಮಾತ ನಾಡಿದರು. ಕೇಂದ್ರ ಸರ್ಕಾರದ ಜನ ಕಲ್ಯಾಣ ಕಾರ್ಯಕ್ರಮಗಳ ಮಾಹಿತಿ ಯನ್ನು ದಾವಣಗೆರೆ ಜಿಲ್ಲೆಯ ಎಲ್ಲಾ 194 ಗ್ರಾಮ ಪಂಚಾಯತಿಗಳ 2 ಸಾವಿರಕ್ಕೂ ಅಧಿಕ ಬೂತ್‌ಗಳಿಗೆ ತಲು ಪಿಸುವ ಕೆಲಸವನ್ನು ಸಂಕಲ್ಪ ಯಾತ್ರೆ ಮೂಲಕ ಮಾಡಲಾಗುವುದು ಎಂದರು.

ಜನವರಿ 25 ರ ವರೆಗೆ ಸಂಕಲ್ಪ ಯಾತ್ರೆ ನಡೆಯಲಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಚಾರ ನಡೆಸಲಾಗುವುದು. ಆಯುಷ್ಮಾನ್ ಭಾರತ್, ಕೃಷಿ ಸಿಂಚಾಯಿನಿ, ಮಾತೃವಂದನಾ, ಸಾಯಿಲ್ ಹೆಲ್ತ್ ಕಾರ್ಡ್, ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ, ಪ್ರಧಾನಮಂತ್ರಿ ಸ್ವ ನಿಧಿ ಸೇರಿದಂತೆ, ಕೇಂದ್ರ ಸರ್ಕಾರದ ಆರು ಸಚಿವಾಲಯದ ಮೂಲಕ 70 ಕ್ಕೂ ಹೆಚ್ಚು ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದರು.

ಯೋಜನೆಗಳಿಗೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಸವಲತ್ತುಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡ ಬೇಕಲ್ಲದೇ ಯೋಜನೆಯಿಂದ ಹೊರಗೆ ಇರುವ ಜನರನ್ನು ಯೋಜನಾ ವ್ಯಾಪ್ತಿಗೆ ತರಬೇಕೆಂದು ಸೂಚಿಸಿದ ಅವರು, ರಾಜ್ಯ ಸರ್ಕಾರದ ಉಚಿತ ಯೋಜನೆಗಳು ಸರಿಯಾಗಿ ಜನರಿಗೆ ತಲುಪುತ್ತಿಲ್ಲ. ಆದರೆ ಕೇಂದ್ರ ಸರ್ಕಾರದ ಹಲವು ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ದೊರೆತಿವೆ. ಈ ಮೂಲಕ ದೇಶದ 13 ಕೋಟಿಗೂ ಅಧಿಕ ಜನರು ಬಡತನ ರೇಖೆಯಿಂದ ಹೊರ ಬಂದಿದ್ದಾರೆ. 2024 ರ ಲೋಕಸಭಾ ಚುನಾವಣೆಯಲ್ಲಿ ಮತ್ತೊಮ್ಮೆ ಮೋದಿಯವರು ಗೆದ್ದು ಪ್ರಧಾನಿಯಾದರೆ ಈ ದೇಶದ ಚಿತ್ರಣ ಸಂಪೂರ್ಣ ಬದಲಾಗಲಿದೆ ಎಂದು ಅವರು ಹೇಳಿದರು.

ಬಳಿಕ ಸಂಸದರು ಕೃಷಿ ಬಳಕೆಯ ಡ್ರೋನ್ ಪ್ರಾತ್ಯಕ್ಷಿಕೆ ವೀಕ್ಷಿಸಿದರು. ಈ ಸಂದರ್ಭದಲ್ಲಿ ಮಾರ್ಗದರ್ಶಿ ಬ್ಯಾಂಕ್ ವ್ಯವಸ್ಥಾಪಕ ಪ್ರಕಾಶ್, ನಬಾರ್ಡ್ ಅಧಿಕಾರಿ ರಶ್ಮಿರೇಖಾ, ತರಳಬಾಳು ಕೃಷಿ ವಿಜ್ಞಾನಿ ಡಾ.ದೇವರಾಜ್ ಉಪಸ್ಥಿತರಿದ್ದರು. ನಂತರ ಪ್ರಚಾರ ವಾಹನ ಜಗಳೂರು ತಾಲ್ಲೂಕಿನ ದೊಣೆಹಳ್ಳಿ ಹಾಗೂ ಮುಸ್ಟೂರು ನ್ಯಾಮತಿ ತಾಲ್ಲೂಕಿನ ಗುಡ್ಡೆಹಳ್ಳಿ, ಕೆಂಚಿಕೊಪ್ಪ ಗ್ರಾಮಗಳಲ್ಲಿ ಪ್ರಚಾರಾಂದೋಲನಾ ನಡೆಸಿ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸಲಾಯಿತು.

# ಇಂದಿನ ವಿದ್ಯಾರ್ಥಿಗಳು ಭವಿಷ್ಯದ ಪ್ರಜೆಗಳು

ಹರಪನಹಳ್ಳಿ, ನ. 27- ಇಂದಿನ ವಿದ್ಯಾರ್ಥಿಗಳು ದೇಶದ ಭವಿಷ್ಯದ ಪ್ರಜೆಗಳು. ವಿದ್ಯಾರ್ಥಿಗಳು, ಶಿಕ್ಷಕರು ಹೇಳಿದ ವಿಷಯಗಳ ಬಗ್ಗೆ ಸಂಪೂರ್ಣ ಅಧ್ಯಯನ ಮಾಡಿದರೆ ಸಮಾಜದಲ್ಲಿ ಪ್ರತಿಭವಂತ, ಸೃಜನಶೀಲ ವ್ಯಕ್ತಿಯಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ವಕೀಲರ ಸಂಘದ ಅಧ್ಯಕ್ಷ ಎಂ.ಅಜ್ಜಣ್ಣ ಹೇಳಿದರು.

ತಾಲ್ಲೂಕಿನ ಗೋವೇರಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಮಕ್ಕಳ ದಿನಾಚರಣೆ ಕುರಿತು ಕಾನೂನು ಅರಿವು ಕಾರ್ಯಕ್ರಮದಲ್ಲಿ ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಿ ಬಳಿಕ ಮಾತನಾಡಿದರು.

ವಿದ್ಯಾರ್ಥಿಗಳು ಇತ್ತಿನ ದಿನಮಾನಗಳಲ್ಲಿ ಟಿ.ವಿ. ಮೊಬೈಲ್ ಫೋನ್‌ಗಳಿಂದ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ದೃಶ್ಯ ಮಾಧ್ಯಮದಿಂದ ದೂರವಿದ್ದು, ಸಮಾಜದಲ್ಲಿ ಉತ್ತಮ ವಿದ್ಯಾರ್ಥಿಯಾಗಿ ಬೆಳೆದಾಗ ಮಾತ್ರ ದೇಶದ ಉತ್ತಮ ನಾಗರಿಕರಾಗಿ ಬಾಳುವುದಕ್ಕೆ ಸಾಧ್ಯವಾಗುತ್ತದೆ ಎಂದರು.



ಹರಪನಹಳ್ಳಿ : ವಕೀಲರ ಸಂಘದ ಅಧ್ಯಕ್ಷ ಅಜ್ಜಣ್ಣ

ಶಿಕ್ಷಣ ಕ್ಷೇತ್ರದ ಸಂಯೋಜಕ ಗಿರಿಜ್ಜಿ ಮಂಜುನಾಥ್ ಮಾತನಾಡಿ, ವಿದ್ಯಾರ್ಥಿಗಳು ಈಗಿನಿಂದಲೇ ವೃತ್ತಿ ಜೀವನದ ಗುರಿಯನ್ನು ಇಟ್ಟುಕೊಂಡು ಕನಸು ಕಾಣಬೇಕಾಗಿದೆ. ಸಮಾಜ ದಲ್ಲಿರುವ ನಿಯಮಗಳನ್ನು ಮತ್ತು ದೇಶದ ಶಿಷ್ಟಾಚಾರಗಳನ್ನು ವಿದ್ಯಾರ್ಥಿಗಳು ಚಾಚು ತಪ್ಪದೇ ಪಾಲಿಸಿದಾಗ ಮಾತ್ರ ಕಾನೂನು ಪಾಲನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದರು.

ವಕೀಲರ ಸಂಘದ ಉಪಾಧ್ಯಕ್ಷ ಕೆ.ವಿರುಪಾಕ್ಷಪ್ಪ ಮಾತನಾಡಿ, ವಿದ್ಯಾರ್ಥಿಗಳು ಮಹಾ ನೀಯರ ಆದರ್ಶದ ಬದುಕನ್ನು ಮತ್ತು ಅವರ ಜೀವನ ಚರಿತ್ರೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಸರ್ಕಾರಿ ಪ್ರೌಢಶಾಲೆಯ ಮುಖ್ಯಾಶಿಕ್ಷಕ ಎಂ.ಬಿ. ಶಿವಾಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಕೀಲರಾದ ಎಂ. ಮೃತ್ಯುಂಜಯ ವಿದ್ಯಾರ್ಥಿಗಳಿಗೆ ಕಾನೂನಿನ ಸಲಹೆ ನೀಡಿದರು.

ವಕೀಲರ ಸಂಘದ ಕಾರ್ಯದರ್ಶಿ ಕೆ. ಆನಂದ, ಶಿಕ್ಷಕರಾದ ನಾಗರಾಜ್, ವಕೀಲ ಬಿ.ತಿಪ್ಪೇಶ್, ತಾಲ್ಲೂಕು ಕಾನೂನು ಸೇವಾ ಸಮಿತಿಯ ಸಿಬ್ಬಂದಿಗಳಾದ ಬಾಗಳಿ ಕೊಟ್ರೇಶ್, ಬಸವರಾಜ್ ಮತ್ತು ಶಿಕ್ಷಕರು ಇದ್ದರು.

# ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ನಾರಾಯಣಸ್ವಾಮಿ

ಬೆಂಗಳೂರು, ನ. 27 - ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ನಿವೃತ್ತ ನ್ಯಾಯಮೂರ್ತಿ ಎಲ್.ನಾರಾಯಣಸ್ವಾಮಿ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಅಧ್ಯಕ್ಷರ ಜೊತೆಗೆ ಇಬ್ಬರು ಸದಸ್ಯರನ್ನೂ ಸಹ ರಾಜ್ಯ ಸರ್ಕಾರ ನೇಮಕ ಮಾಡಿದ್ದು, ನಿವೃತ್ತ ಜಿಲ್ಲಾ ನ್ಯಾಯಾಧೀಶ ಎಸ್.ಕೆ. ವಂಟಿಗೋಡಿ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಶ್ಯಾಮ್ ಭಟ್ ಅವರನ್ನು ಸದಸ್ಯರನ್ನಾಗಿ ನೇಮಿಸಿದೆ.

## ಡಿ.ಕೆ. ಶಿವಕುಮಾರ್ ವಿದೇಶ ಪ್ರವಾಸಕ್ಕೆ ನ್ಯಾಯಾಲಯ ಅಸ್ತು

ನವದೆಹಲಿ, ನ. 27 - ಅಕ್ರಮ ಹಣ ಪ್ರಕರಣದಲ್ಲಿ ಆರೋಪಿಯಾಗಿರುವ ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿದೇಶ ಪ್ರವಾಸ ಕೈಗೊಳ್ಳಲು ದೆಹಲಿ ನ್ಯಾಯಾಲಯ ಅನುಮತಿ ನೀಡಿದೆ. ನವೆಂಬರ್ 29ರಂದು ದುಬೈಗೆ ತೆರಳಲು ಶಿವಕುಮಾರ್ ಅವರಿಗೆ ವಿಶೇಷ ನ್ಯಾಯಮೂರ್ತಿ ವಿಕಾಸ್ ಧುಲ್ ಅವರು ಅನುಮತಿ ನೀಡಿದ್ದಾರೆ. ಎಂಟು ಬಾರಿ ಶಾಸಕರಾಗಿರುವ ಶಿವಕುಮಾರ್, ಹಾಲಿ ಉಪಮುಖ್ಯಮಂತ್ರಿಯೂ ಆಗಿದ್ದಾರೆ. ಅವರು ಭಾರತದಿಂದ ಪಲಾಯನ ಮಾಡುವ ಸಾಧ್ಯತೆ ತೀರಾ ದೂರವಿದೆ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಾಗಾನಹಳ್ಳಿ ಕ್ಯಾಂಪ್, ಓಬಜ್ಜಿ ಹಳ್ಳಿ, ಓಬಜ್ಜಿಹಳ್ಳಿ ಕ್ಯಾಂಪ್, ಅರಸಾಪುರ, ಬದನಾಯಕರ ತಾಂಡ, ಕಡ್ಲೇಬಾಳು, ಹಳೇ ಕಡ್ಲೇಬಾಳು ಹಾಗೂ ಸುತ್ತಮುತ್ತ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ಇಂದು

ಶ್ರೀ ಅನ್ನದಾನೀಶ್ವರ ಶಾಖಾ ಮಠದಲ್ಲಿ ಇಂದು ಸಂಜೆ 6.30 ಕ್ಕೆ ಶಿವಾನುಭವ ಸಂಪದ ನಡೆಯುವುದು. ಶ್ರೀ ಮುಪ್ಪಿನ ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಉದ್ಘಾಟನೆ : ಡಾ. ರವಿಕುಮಾರ್ ಟಿ.ಜಿ, ಉಪನ್ಯಾಸ : ಡಾ. ಅಶೋಕ್ ಕುಮಾರ್ ವಿ ಪಾಳೇದ.


Vishistaa
Educational Institutions
54/2, 9th Division 5th ward, 2nd Main Road, Opp. AVK College Davanagere - 577004

WALK-IN-INTERVIEW

| POSITION | DEPARTMENT | QUALIFICATION | EXPERIENCE |
|---|---|---|---|
| FACULTY | COMPUTER SCIENCE | Diploma/B.Tech | 0 - 2 Years |
| FACULTY | CADD/REVIT | Diploma/B.Tech | 0 - 2 Years |
| COUNSELLING | MARKETING | B.Com/BBA/MBA | 1 year |

28th - 30th November - 11:30 AM to 5:30 PM
send your resumes to : info@vishistaa.org or whatsapp to 91645 17776


# ಅಥಿತ್ ಅಂಬರ್‌ಕರ್ ಅವರಿಂದ ಮೋದಿಜಿಯವರ ಸಾಧನೆಗಳ ಕ್ಯಾಲೆಂಡರ್





ದಾವಣಗೆರೆ, ನ. 27 - ನರೇಂದ್ರ ಮೋದಿಯವರು ಪ್ರಧಾನಮಂತ್ರಿಯಾಗಿ ಮತ್ತು ಕೇಂದ್ರ ಸರ್ಕಾರದ ಅವಧಿಯಲ್ಲಿ ನೀಡಿದಂತಹ ಜನಪರ ಯೋಜನೆಗಳು ಹಾಗೂ ದೇಶದ ಅಭಿವೃದ್ಧಿಗಾಗಿ ಶ್ರಮಿಸಿರುವ ಸಾಧನೆಗಳ ಕುರಿತಾಗಿ ಜನರ ಕಣ್ಮುಂದೆ ಕಾಣಸಿಗುವಂತಹ ಹೊಸ ಪ್ರಯತ್ನ ಮಾಡಲಾಗಿದೆ.

ದಾವಣಗೆರೆ ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷರಾದ ಅಥಿತ್ ಅಂಬರ್‌ಕರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಸಾಧನೆಗಳನ್ನು ನೆನಪಿಸುವಂತಹ ಕ್ಯಾಲೆಂಡರ್ ಹೊರತಂದಿದ್ದಾರೆ. ಅದು ದಿನಾಂಕವುಳ್ಳ ಕ್ಯಾಲೆಂಡರ್ ಆಗಿದ್ದು, ಪ್ರತಿ ತಿಂಗಳ ಕ್ಯಾಲೆಂಡರ್ ನರೇಂದ್ರ ಮೋದಿ ಅವರ ಸಾಧನೆಗಳನ್ನೊಳಗೊಂಡಿದೆ. ಈ ಕ್ಯಾಲೆಂಡರ್ ನರೇಂದ್ರ ಮೋದಿ ಅವರಿಗೆ ಅಥಿತ್ ಅಂಬರ್‌ಕರ್ ನೀಡುವ ನೆನಪಿನ ಉಡುಗೊರೆಯೂ ಆಗಿದೆ.

ಇತ್ತೀಚಿಗೆ ಸೋಮೇಶ್ವರ ಸಮೂಹ ಸಂಸ್ಥೆಗಳು ಹಾಗೂ ಎಸ್.ಎ. ರವೀಂದ್ರನಾಥ್ ಅಭಿಮಾನಿ ಬಳಗದ ವತಿಯಿಂದ ನಗರದ ನಿಟ್ಟುವಳ್ಳಿ ರಸ್ತೆಯಲ್ಲಿನ ಸೋಮೇಶ್ವರ ವಿದ್ಯಾಲಯದಲ್ಲಿ ಮಾಜಿ ಶಾಸಕ ಎಸ್.ಎ. ರವೀಂದ್ರನಾಥ್ ರವರ ಹುಟ್ಟುಹಬ್ಬದ ಪ್ರಯುಕ್ತ ದೇಶ ಪ್ರೇಮವನ್ನು ಪ್ರಚುರಪಡಿಸುವ 'ವೀರಭಾರತಿ' ನೃತ್ಯ ರೂಪಕ ಪ್ರದರ್ಶನ ಸಮಾರಂಭದಲ್ಲಿ ಅಥಿತ್ ಅಂಬರ್‌ಕರ್ ಅವರು ನರೇಂದ್ರ ಮೋದಿ ಅವರ ಸಾಧನೆಗಳುಳ್ಳ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.

ಈ ವಿಶೇಷ ಸಂದರ್ಭದಲ್ಲಿ ಮಾಜಿ ಶಾಸಕ ಎಸ್.ಎ. ರವೀಂದ್ರನಾಥ್, ಸಂಸದ ಡಾ. ಜಿ.ಎಂ. ಸಿದ್ದೇಶ್ವರ್, ಮಾಜಿ ಶಾಸಕರುಗಳಾದ ಪ್ರೊ. ಲಿಂಗಣ್ಣ, ಗುರುಸಿದ್ದನಗೌಡ್ರು, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಎಚ್. ಶಿವಯೋಗಿ ಸ್ವಾಮಿ, ರಾಜ್ಯ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ್ ಬಾಳೆಕಾಯಿ, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಸೋಮೇಶ್ವರ ವಿದ್ಯಾಲಯದ ಗೌರವ ಕಾರ್ಯಕದರ್ಶಿ ಕೆ.ಎಂ. ಸುರೇಶ್ ಸೇರಿದಂತೆ ಇನ್ನಿತರರು ಸಾಕ್ಷಿಯಾದರು. ಈ ಸಂದರ್ಭದಲ್ಲಿ ಅಥಿತ್ ಅಂಬರ್‌ಕರ್ ಉಪಸ್ಥಿತರಿದ್ದರು.

Advt.



## ಬಿಐಇಟಿಯಲ್ಲಿ ಕನ್ನಡ ರಾಜ್ಯೋತ್ಸವ

ದಾವಣಗೆರೆಯ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೋಮವಾರ ಕನ್ನಡ ರಾಜ್ಯೋತ್ಸವವನ್ನು ಅದ್ಧೂರಿಯಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳು ನಾಡಿನ ಸಂಸ್ಕೃತಿ ಪ್ರತಿಬಿಂಬಿಸುವ ವೇಷ ತೊಟ್ಟು ಸಂಭ್ರಮಿಸಿದರು.

# ಡಿಸಿಎಂನಲ್ಲಿ ನಿರ್ಮಾಣ ಹಂತದ ಕಾಮಗಾರಿ ವೀಕ್ಷಿಸಿದ ಸಂಸದರು



ದಾವಣಗೆರೆ, ನ.27- ಸ್ಮಾರ್ಟ್ ಸಿಟಿ ಅನುದಾನದಲ್ಲಿ ನಗರದ ಡಿ.ಸಿ.ಎಂ. ಟೌನ್‌ಶಿಪ್‌ನಲ್ಲಿ ಸುಮಾರು 6.50 ಕೋಟಿ ರೂ. ವೆಚ್ಚದಲ್ಲಿ ಬಹುಕ್ರೀಡೆಗಳ ಒಳಾಂಗಣ ಕ್ರೀಡಾಂಗಣದಲ್ಲಿ ರಾಷ್ಟ್ರಮಟ್ಟದ ಕ್ರೀಡಾಸ್ಪರ್ಧೆಗೆ ಪೂರಕವಾದ ಸೌಲಭ್ಯಗಳನ್ನು ಒದಗಿಸಿ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಡಿ.ಸಿ.ಎಂ. ಟೌನ್‌ಶಿಪ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಒಳಾಂಗಣ ಕ್ರೀಡಾಂಗಣವನ್ನು ವೀಕ್ಷಣೆ ಮಾಡಿ ನಂತರ ಅವರು ಮಾತನಾಡಿದರು.

ಇದರ ಮೂಲ ಉದ್ದೇಶವೇ ಬೇರೆಯಾಗಿತ್ತು. ಇಲ್ಲಿ ಕ್ರೀಡಾ ತರಬೇತುದಾರರರಿಗೆ ತರಬೇತಿ ನೀಡುವ ಕೇಂದ್ರವನ್ನಾಗಿ ಮಾಡುವ ಉದ್ದೇಶವಿತ್ತು. ಆದರೆ, ಅದನ್ನು ಬದಲಾಯಿಸಿ, ರಾಜ್ಯ ಮತ್ತು ರಾಷ್ಟ್ರಮಟ್ಟದ ಒಳಾಂಗಣ ಕ್ರೀಡೆಗಳಿಗಾಗಿ ಕ್ರೀಡಾಂಗಣವನ್ನಾಗಿ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ಪ್ರೇಕ್ಷಕರ ಗ್ಯಾಲರಿ ಸಾಮರ್ಥ್ಯ ಕಡಿಮೆ ಇದೆ. ಸಾಧ್ಯವಾದರೆ ಉತ್ತರ ಭಾಗದಲ್ಲಿ ಪ್ರೇಕ್ಷಕರ ಗ್ಯಾಲರಿ ಸಾಮರ್ಥ್ಯವನ್ನು ಹೆಚ್ಚಿಸಲು ಅವಕಾಶ ಕಲ್ಪಿಸಿಕೊಳ್ಳಿ ಎಂದು ಸ್ಮಾರ್ಟ್ ಸಿಟಿ ಇಂಜಿನಿಯರ್‌ಗಳಿಗೆ ಸಲಹೆ ನೀಡಿದರು. 4ಷಟಲ್ ಕೋರ್ಟ್ ಹಾಗೂ ಬಾಸ್ಕೆಟ್‌ಬಾಲ್ ಕೋರ್ಟ್‌ಗಳನ್ನು ನಿರ್ಮಾಣ ಮಾಡುವ ಉದ್ದೇಶವಿದೆ ಎಂದು ಇಂಜಿನಿಯರ್‌ಗಳು ಮಾಹಿತಿ ನೀಡಿದರು. ಒಳಾಂಗಣ ಕ್ರೀಡಾಂಗಣಕ್ಕೆ ಬರುವ ಅಪ್ರೋಚ್ ರಸ್ತೆಗಳು ತೀರಾ ಹದಗೆಟ್ಟಿದ್ದು, ರಸ್ತೆ ಅಭಿವೃದ್ಧಿಪಡಿಸುವಂತೆ ಸಂಸದರು ಸೂಚನೆ ನೀಡಿದರು.

31.03.2023 ಕ್ಕೆ ಕಾಮಗಾರಿ ಪೂರ್ಣಗೊಳ್ಳಬೇಕಾಗಿತ್ತು. ಅದರೆ, ಅನೇಕ ಕಾರಣಗಳಿಂದ ಕಾಮಗಾರಿ ನಿಧಾನಗತಿಯಲ್ಲಿ ನಡೆಯುತ್ತಿದೆ. ಜನವರಿ 2024 ರ ಅಂತ್ಯಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. ಈ ಕುರಿತು ಗುತ್ತಿಗೆದಾರರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ ಎಂದು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್‌ಕುಮಾರ್ ತಿಳಿಸಿದರು.

ಪಾಲಿಕೆ ವಿರೋಧ ಪಕ್ಷದ ನಾಯಕ ಪ್ರಸನ್ನಕುಮಾರ್, ಮಾಜಿ ಮೇಯರ್ ಎಸ್.ಟಿ.ವೀರೇಶ್, ಪಾಲಿಕೆ ಸದಸ್ಯರುಗಳಾದ ಕೆ.ಎಂ.ವೀರೇಶ್, ಮುಖಂಡರುಗಳಾದ ಹೆಗ್ಗಪ್ಪ, ಜಯಪ್ರಕಾಶ್, ಗಣೇಶಪ್ಪ, ರಮೇಶ್, ಸುರೇಶ್ ಸೇರಿದಂತೆ ಇತರರು ಸಂಸದರ ಜೊತೆಗಿದ್ದರು.

## ನಗರದ ಶ್ರೀ ದಾನಮ್ಮ ದೇವಸ್ಥಾನದಲ್ಲಿ ಇಂದಿನಿಂದ ಪುರಾಣ, ಪ್ರವಚನ




ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ಗುಡ್ಡಾಪುರದ ದಾನಮ್ಮ ದೇವಿ ದೇವಸ್ಥಾನದಲ್ಲಿ ಇಂದಿನಿಂದ ಬರುವ ಡಿಸೆಂಬರ್ 11 ರವರೆಗೆ ಪ್ರತಿದಿನ ಸಂಜೆ 7 ಗಂಟೆಗೆ ಪುರಾಣ, ಪ್ರವಚನ ನಡೆಯಲಿದೆ.

ಶ್ರೀ ಪುಟ್ಟರಾಜ ಕವಿ ಗವಾಯಿಗಳವರಿಂದ ರಚಿತವಾದ ಶಿವಶರಣೆ ಗುಡ್ಡಾಪುರದ ದಾನಮ್ಮ ದೇವಿಯ ಪುರಾಣ ಮತ್ತು ಶ್ರೀ ಅಕ್ಕಮಹಾದೇವಿಯ ಚರಿತ್ರೆ ಪ್ರವಚನವನ್ನು ಶ್ರೀ ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾದ ವೇ. ಮಹಾಂತೇಶ ಶಾಸ್ತ್ರಿಗಳು ಹಿರೇಮಠ (ಕಲ್ಲೂರು, ಚನ್ನಗಿರಿ) ಇವರು ನಡೆಸಿಕೊಡುವರು. ಸ್ಥಳೀಯ ಶ್ರೀ ವೀರೇಶ್ವರ ಪುಣ್ಯಾಶ್ರಮದ ಯಲಗೂರೇಶ ಟಕ್ಕಳಿಕಿ ಅವರು ತಬಲಾ ವಾದನ ನುಡಿಸುವರು.

ಬರುವ ಡಿಸೆಂಬರ್ 12 ರ ಮಂಗಳವಾರ ಛಟ್ಟಿ ಅಮಾವಾಸ್ಯೆ ಇದ್ದು, ಅಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಮುತ್ತೈದೆಯರಿಗೆ ಉಡಿ ತುಂಬುವುದು, ಮದುವೆ ಆಗುವವರಿಗೆ ಕಂಕಣ ದಂಡಿ ಹಾಕಿಸುವ ಕಾರ್ಯಕ್ರಮ ಜರುಗಲಿದೆ.

ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ. ಶ್ರೀಮತಿ ದೇವರಮನೆ ಗಂಗಮ್ಮ ಮತ್ತು ಮಕ್ಕಳು (ದಾವಣಗೆರೆ), ಶ್ರೀಮತಿ ವೈ. ಭಾರತಿ ಮತ್ತು ವೈ.ವೆಂಕಟೇಶ ರೆಡ್ಡಿ (ಬೆಂಗಳೂರು) ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘಕ್ಕೆ ಭಂಡಾರೆ



ದಾವಣಗೆರೆ, ನ. 27 - ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ಬೆಂಗಳೂರು)ದ ಪದಾಧಿಕಾರಿಗಳ ಚುನಾವಣೆಯಲ್ಲಿ ಚಂದ್ರಕಾಂತ್ ಎನ್. ಭಂಡಾರೆ ಅವರು ವಲಯ ಸಂಘಟನಾ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿಯಾಗಿರುವ ಭಂಡಾರೆ ಅವರು, ಅಖಿಲ ಕರ್ನಾಟಕ ಸ್ವಕುಳಸಾಳಿ ಸಮಾಜದ ರಾಜ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

# ದಾವಣಗೆರೆಯಲ್ಲಿ ಇಂದಿನಿಂದ ಕ್ರಿಕೆಟ್ ಹಬ್ಬ



ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸ್ಮರಣಾರ್ಥ 5 ದಿನಗಳ ಕ್ರಿಕೆಟ್ ಪಂದ್ಯಾವಳಿ

ದಾವಣಗೆರೆ, ನ.27- ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪನವರ ಸವಿನೆನಪಿಗಾಗಿ 16ನೇ ವರ್ಷದ ರಾಷ್ಟ್ರ ಮಟ್ಟದ ಹೊನಲು ಬೆಳಕಿನ ಲೀಗ್ ಕಂ ನಾಕೌಟ್ ಕ್ರಿಕೆಟ್ ಪಂದ್ಯಾವಳಿಗೆ ನಗರದ ಜಿಲ್ಲಾ ಕ್ರಿಡಾಂಗಣದಲ್ಲಿ ನಾಳೆ ದಿನಾಂಕ 27ರಂದು ಚಾಲನೆ ನೀಡಲಾಗುತ್ತದೆ ಎಂದು ದಿನೇಶ್ ಕೆ.ಶೆಟ್ಟಿ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮಂಗಳವಾರ ಸಂಜೆ ಪಂದ್ಯಾವಳಿಗಳಿಗೆ ಚಾಲನೆ ನೀಡಲಿದ್ದಾರೆ. ಉದ್ಘಾಟನೆ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್, ಎಸ್ಪಿ ಉಮಾ ಪ್ರಶಾಂತ್, ಡಾ.ಪ್ರಭಾ ಮಲ್ಲಿಕಾರ್ಜುನ್, ಸಮರ್ಥ್ ಮಲ್ಲಿಕಾ ರ್ಜುನ್, ಉದ್ಯಮಿ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ಶ್ರೀನಿವಾಸ್ ಶಿವಗಂಗಾ, ರಾಜು ರೆಡ್ಡಿ, ಉದಯ ಕುಮಾರ್ ಇತರರು ಇರಲಿದ್ದಾರೆ.

ಟೂರ್ನಿಯಲ್ಲಿ ಪ್ರಥಮ ಬಹುಮಾನ 5,05,555 ರೂ. ಹಾಗೂ ಶಾಮನೂರು ಡೈಮಂಡ್ ಕಪ್, ದ್ವಿತೀಯ ತಂಡಕ್ಕೆ 3,05,555 ನಗದು ಹಾಗೂ ಶಿವಗಂಗಾ ಕಪ್ ಹಾಗೂ ತೃತೀಯ ಬಹುಮಾನವಾಗಿ 1,5,5500 ರೂ. ನಗದು ಹಾಗೂ ಆಕರ್ಷಕ ಟ್ರೋಫಿ ನೀಡಲಾಗುತ್ತದೆ. ಎಲ್ಲಾ ಪಂದ್ಯಗಳು M9SPORTS ಯೂ ಟ್ಯೂಬ್ ನಲ್ಲಿ ನೇರ ಪ್ರಸಾರ ಮಾಡಲಾಗುವುದು.

ಟೂರ್ನಿಯಲ್ಲಿ ದಾವಣಗೆರೆಯ 12 ಹಾಗೂ ಬೆಂಗಳೂರಿನ 16 ತಂಡಗಳೂ ಸೇರಿ ಮಹಾರಾಷ್ಟ್ರ, ತಮಿಳುನಾಡು, ಉತ್ತರ ಪ್ರದೇಶ, ಅಯೋಧ್ಯಾ ನಗರಗಳು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ 38 ತಂಡಗಳು ಭಾಗವಹಿಸಲಿವೆ.

ಪತ್ರಿಕಾಗೋಷ್ಠಿಯಲ್ಲಿ ಜಯಪ್ರಕಾಶ್ ಗೌಡ, ಹಾಲಪ್ಪ, ಆಕಾಶ್, ಕಾರ್ತಿಕ್, ಪ್ರಕಾಶ್, ರಾಘವೇಂದ್ರ, ಯೋಗೀಶ್, ಜಿ.ಬಿ. ಪಾಟೀಲ್, ವಿಜಯ್, ನಿಖಿತ್ ಶೆಟ್ಟಿ ಉಪಸ್ಥಿತರಿದ್ದರು.

## ರಾಣೇಬೆನ್ನೂರಿನಲ್ಲಿ ಇಂದು ಕಾರ್ತಿಕ

ಶ್ರೀ ಬೀರೇಶ್ವರ ನಗರದ ಶ್ರೀ ವೀರಭದ್ರೇಶ್ವರ ದೇವರ ಕಾರ್ತಿಕೋತ್ಸವ ಹಾಗೂ ಗುಗ್ಗುಳ ಕಾರ್ಯಕ್ರಮ ಇಂದು ನಡೆಯಲಿದೆ. ಅಂದು ಬೆಳಿಗ್ಗೆ ಸ್ವಾಮಿಗೆ ಅಭಿಷೇಕ, ವಿಶೇಷ ಪೂಜೆ, ಗುಗ್ಗುಳ ಅನ್ನ ಸಂತರ್ಪಣೆ, ಸಂಜೆ ಕಾರ್ತಿಕ ನಂತರ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ. ಶಾಸಕ ಪ್ರಕಾಶ ಕೋಳಿವಾಡ, ಮಾಜಿ ಶಾಸಕ ಅರುಣ ಪೂಜಾರ, ಜಿ.ಬಿ.ಮಾಸಣಗಿ ಪಾಲ್ಗೊಳ್ಳುವರು.


ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ಮಹಾನಗರ ಪಾಲಿಕೆ ವತಿಯಿಂದ 68ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕೊಡಮಾಡುವ 'ಕರ್ನಾಟಕ ರಾಜ್ಯೋತ್ಸವ' ಪುರಸ್ಕಾರಕ್ಕೆ ಆಯ್ಕೆಯಾದ ಫುಟ್‌ಬಾಲ್ ತರಬೇತಿದಾರ ನೂರ್ ಅಹ್ಮದ್ ಇವರಿಗೆ ಹೃದಯಪೂರ್ವಕ ಅಭಿನಂದನೆಗಳು.

ಕುಟುಂಬ ವರ್ಗದವರು



SAPTHAGIRI VIDYALAYA
Chigateri Layout, Kunduvada Road, Davangere-06
REQUIRED TEACHERS
For High School
Science (CBZ) and English
REQUIRED WARDEN
2 Post | Male
For more details contact :
9620250067, 7406126006
Send your resume to : 9620250067
sapthagirischooldvg@gamil.com





ಹುಟ್ಟುಹಬ್ಬದ ಶುಭಾಶಯಗಳು

ಇಂದು ತಮ್ಮ 57ನೇ ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರೂ, ಸಹೃದಯಿ, ಅಜಾತ ಶತ್ರು, ಸಮಾಜ ಸೇವೆಯಲ್ಲಿ ಮುಂದಾಳು, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ

ಶ್ರೀ ಬಿ. ಕರಿಬಸಪ್ಪ ಅವರಿಗೆ 57 ನೇ ಹುಟ್ಟುಹಬ್ಬದ ಶುಭಾಶಯಗಳು.

ಶುಭ ಕೋರುವವರು : ಕೆ.ಬಿ. ಜನಾರ್ಧನಪ್ಪ ಮತ್ತು ಸಹೋದರರು, ಸಹೋದರಿಯರು ಮತ್ತು ಮಕ್ಕಳು, ಕರಿಯಪ್ಪರ (ಕೊಟ್ಯಾಳ್) ವಂಶಸ್ಥರು ಶಿರಮಗೊಂಡನಹಳ್ಳಿ.
ಶ್ರೀಮತಿ ನಯನ ಬಿ. ಶ್ರೀ ವಿನಾಯಕ ಡಿ., ಚಿ|| ದಯಾನಂದ್ ಬಿ. ಕರಿಬಸಪ್ಪ,
ಶ್ರೀಮತಿ ಮಂಜುಳ ಬಿ. ನಾಗರಾಜ್ ಮತ್ತು ಮಕ್ಕಳು,
ಶ್ರೀಮತಿ ಕಲ್ಪನಾ ಶ್ರೀ ಬಿ.ಶಿವಕುಮಾರ್ (ಗ್ರಾ.ಪಂ ಸದಸ್ಯರು) ಮತ್ತು ಮಕ್ಕಳು, ಎಲೆಬೇತೂರು.
ಎಸ್.ಎಸ್.ಎಂ. ಅಭಿಮಾನಿ ಬಳಗ,ಬಿ. ಕರಿಬಸಪ್ಪ ಅಭಿಮಾನಿ ಬಳಗ, ದಾವಣಗೆರೆ.
ಬುಡ್ಡನಾರಪ್ಪ ವಂಶಸ್ಥರು, ಎಲೆಬೇತೂರು. ಎಲೆಬೇತೂರು ಮತ್ತು ಕಕ್ಕರಗೊಳ್ಳ ಜಿಲ್ಲಾ ಪಂಚಾಯತ್ ಕ್ಷೇತ್ರದ ಮುಖಂಡರುಗಳು ಹಾಗೂ ಗ್ರಾಮಸ್ಥರು



ಕೆ.ಜೆ. ರಾಘವೇಂದ್ರ, ಶಿರಮಗೊಂಡನಹಳ್ಳಿ



ಹಾರ್ದಿಕ ಅಭಿನಂದನೆಗಳು



ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಬೆಂಚ್‌ಪ್ರೆಸ್ ಚಾಂಪಿಯನ್‌ಶಿಪ್‌ನಲ್ಲಿ ಅಂತರರಾಷ್ಟ್ರೀಯ ಕ್ರೀಡಾಪಟುಗಳೂ ಮತ್ತು ದಾವಣಗೆರೆ ಮಹಾನಗರ ಪಾಲಿಕೆ ಸದಸ್ಯರೂ ಆದ
ಶ್ರೀ ಜೆ.ಎನ್. ಶ್ರೀನಿವಾಸ್
ಅವರು 165 ಕೆ.ಜಿ. ಭಾರವನ್ನು ಎತ್ತುವುದರ ಮೂಲಕ ಪ್ರಥಮ ಸ್ಥಾನ ಪಡೆದು, ಚಿನ್ನದ ಪದಕ ಗಳಿಸಿದ್ದಾರೆ.
ಇವರಿಗೆ ಹೃದಯಪೂರ್ವಕ ಅಭಿನಂದನೆಗಳು.



ರಾಕೇಶ್ ಹಾದಿಮನಿ
ಗುತ್ತಿಗೆದಾರರು,
ದಾವಣಗೆರೆ.



ಗ್ರೇ ಪ್ಯಾರೋಟ್ ಕಳೆದಿದೆ



ಈ ಪಕ್ಷಿಯ ಸುಳಿವು ಸಿಕ್ಕವರು ಮತ್ತು ಪಕ್ಷಿಯನ್ನು ತಂದು ಕೊಟ್ಟವರಿಗೆ ಬಹುಮಾನ ಕೊಡಲಾಗುವುದು.
ಸಂಪರ್ಕಿಸಿ:
92432 24551, 98442 22057



ಶಿವ



ವಿಶ್ವಬಂಧು ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹರಪನಹಳ್ಳಿ



ಶ್ರೀ ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಿರಿಗೆರೆ, ಇವರ ಕೃಪಾಶೀರ್ವಾದದೊಂದಿಗೆ ವಿಶ್ವಬಂಧು ಸೌಹಾರ್ದ ಸಹಕಾರಿ ಸಂಘ ನಿ., ಹರಪನಹಳ್ಳಿ ಇದರ ಅಧ್ಯಕ್ಷರ ಸ್ಥಾನಕ್ಕೆ ಶ್ರೀ ಪ್ರಕಾಶ್ ಎಂ. ಹುಣ್ಸೆಹಳ್ಳಿ ಇವರನ್ನು ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ ಸಮಾಜದ ಹಿರಿಯರಾದ ಶ್ರೀ ಪಿ. ಮಹಾಬಲೇಶ್ವರ ಗೌಡ್ರು, ಶ್ರೀ ಜಿ. ನಂಜನಗೌಡ್ರು, ಹರಪನಹಳ್ಳಿ ತಾಲ್ಲೂಕು ಸಾಧು ಸಮಾಜದ ಅಧ್ಯಕ್ಷರು ಹಾಗೂ ಸದಸ್ಯರು, ಸಮಾಜದ ಹಿರಿಯರು, ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರು, ಸಿಬ್ಬಂದಿ ವರ್ಗದವರು ಹಾಗೂ ಸಂಘದ ಎಲ್ಲಾ ಷೇರುದಾರರಿಗೆ ಹೃತ್ಪೂರ್ವಕ ಕೃತಜ್ಞತೆಗಳು.




ಅಧ್ಯಕ್ಷರು
ಪಿ. ಕೆಂಚನಗೌಡ
ಯು. ಬೇವಿನಹಳ್ಳಿ




ಉಪಾಧ್ಯಕ್ಷರು
ಪ್ರಕಾಶ್ ಎಂ.
ಹುಣ್ಸೆಹಳ್ಳಿ

ನೂತನ ಆಡಳಿತ ಮಂಡಳಿಯ ನಿರ್ದೇಶಕರು




ಪಿ. ಪ್ರೇಮ್‌ಕುಮಾರ್, ಚಿಗಟೇರಿ | ಶೈಲಜಾ ಹೆಚ್. ಹರಪನಹಳ್ಳಿ | ಬಸವನಗೌಡ ಬಿ.ವಿ. ಗೌರಿಪುರ | ಆರ್. ಶಿವಕುಮಾರ್‌ಗೌಡ, ಬಾಗಳಿ



ಟಿ. ಮಂಜುನಾಥ್, ಅಣಜಿಗೆರೆ | ಕಿರಣ್ ಕುಮಾರ್ ಜಿ.ಕೆ., ಕ್ಯಾರಕಟ್ಟೆ | ಗೌಡ್ರು ಎರ್ರಿಸ್ವಾಮಿ, ಡಗ್ಗಿಬಸಾಪುರ | ಶಶಿಕಲಾ ಎಂ. ನಂದಿಬೇವೂರು

#117/ಜಿ3, ಜಿ4, ಆದರ್ಶ ಕಾಂಪ್ಲೆಕ್ಸ್, ಐ.ಬಿ.ಸರ್ಕಲ್ ಹತ್ತಿರ, ಹೊಸಪೇಟೆ ರಸ್ತೆ, ಹರಪನಹಳ್ಳಿ, ವಿಜಯನಗರ - 583131,
ಮೊಬೈಲ್ ನಂ. 94482 60430, 99020 62828 E-mail - vishwabandhu2018.19@gmai.com


## ನೇತ್ರದಾನಿ ಕಾಂತಲಕ್ಷ್ಮಮ್ಮ ಕಾಸಲ್ ವಿಶ್ವನಾಥ ಶೆಟ್ಟಿ ನಿಧನ



ದಾವಣಗೆರೆ ವಾಸಿ ಕಾಸಲ್ ವಿ. ರವಿಕುಮಾರ್ ಮತ್ತು ಕಾಸಲ್ ವಿ. ಮಂಜುನಾಥ್ ಇವರ ಮಾತೃಶ್ರೀ

ಶ್ರೀಮತಿ ಕಾಂತಲಕ್ಷ್ಮಮ್ಮ ಕಾಸಲ್ ವಿಶ್ವನಾಥ ಶೆಟ್ಟಿ

ಇವರು, ದಿನಾಂಕ 27.11.2023ರ ಮಧ್ಯಾಹ್ನ 2.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 87 ವರ್ಷ ವಯಸ್ಸಾಗಿದ್ದು, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು, ಕಾಸಲ್ ಕುಟುಂಬದವರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಸ್ವಗೃಹ 'ವಿಶ್ವ ಕಾಂತಿ' ಎಂ.ಸಿ.ಸಿ. 'ಬಿ' ಬ್ಲಾಕ್, 4ನೇ ಮುಖ್ಯರಸ್ತೆ, ದಾವಣಗೆರೆಯಲ್ಲಿ ಇರಿಸಲಾಗಿದೆ. ಮೃತರ ಅಂತ್ಯಸಂಸ್ಕಾರವನ್ನು ದಿನಾಂಕ 28.11.2023ರ ಮಂಗಳವಾರ ಬೆಳಿಗ್ಗೆ 10.30 ಕ್ಕೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :
ಕಾಸಲ್ ವಿ. ರವಿಕುಮಾರ್ : 7760993311, ಕಾಸಲ್ ವಿ. ಮಂಜುನಾಥ್ : 9844040235